
ಅಹರ್ನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪುಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ

ಸಂಪುಟ : 44 | ಸಂಚಿಕೆ : 6 | ಶುಭಕೃತ್ – ಆಷಾಢ | ಕಲಿಯುಗಾಬ್ದ 5124 | 1-07-2022 | ತ್ರೈವಾರ್ಷಿಕ : ರೂ. 150.00 | ಬಿಡಿ ಪ್ರತಿ : ರೂ. 3.00 | ಪುಟಗಳು : 4

ರಾಷ್ಟ್ರೋತ್ಥಾನ ಸಾಹಿತ್ಯದ ವತಿಯಿಂದ 'ರಾಷ್ಟ್ರತಪಸ್ವಿ – ಶ್ರೀ ಗುರೂಜಿ' ಪುಸ್ತಕದ ಲೋಕಾರ್ಪಣ ಕಾರ್ಯಕ್ರಮ ನಡೆಯಿತು. ಪೂಜ್ಯ ಶ್ರೀ ಸಿದ್ಧರಾಮೇಶ್ವರ ಸ್ವಾಮೀಜಿ, ಪತ್ರಕರ್ತರಾದ ವಿಶ್ವೇಶ್ವರ್ ಭಟ್, ಹಿರಿಯ ಪ್ರಚಾರಕರಾದ ಸು.ರಾಮಣ್ಣ, ರಾಷ್ಟ್ರೋತ್ಥಾನದ ಎಂ.ಪಿ ಕುಮಾರ್, ಪುಸ್ತಕದ ಅನುವಾದಕರಾದ ಚಂದ್ರಶೇಖರ ಭಂಡಾರಿಯವರು ಉಪಸ್ಥಿತರಿದ್ದರು.

## ಸಹಿಷ್ಣುತೆಯ ಪಾಠ ಕಲಿಯಬೇಕಿದೆ ಇಸ್ಲಾಂ

ಇತ್ತೀಚೆಗೆ ಬಿಜೆಪಿಯ ರಾಷ್ಟ್ರೀಯ ವಕ್ತಾರರಾದ ನೂಪುರ್ ಶರ್ಮ ಖಾಸಗಿ ಚಾನೆಲ್ ಒಂದರ ಪ್ಯಾನಲ್ ಡಿಸ್ಕಶನ್‌ನಲ್ಲಿ ಎದುರಿಗಿದ್ದ ಮತ್ತೊಬ್ಬ ಇಸ್ಲಾಮಿಕ್ ಚಿಂತನೆಯ ಪ್ಯಾನೆಲಿಸ್ಟ್ ಶಿವಲಿಂಗದ ಬಗ್ಗೆ ಅವಾಚ್ಯವಾಗಿ ಮಾತನಾಡಿದಾಗ ಅದರಿಂದ ರೋಸಿಹೋದ ಆಕೆ ನೀವು ಶಿವಲಿಂಗದ ಬಗೆಗೆ ಮಾತನಾಡುವುದಾದರೆ ನಾವ್ಯಾಕೆ ಪ್ರವಾದಿ ಮಹಮ್ಮದರ ಬಗೆಗೆ ಹೀಗೆ ಮಾತನಾಡಬಾರದು? ಎಂದು ಪ್ರಶ್ನಿಸಿದ ವೀಡಿಯೋವನ್ನು ಕತ್ತರಿಸಿ ಸಾಮಾಜಿಕ ಜಾಲತಾಣದಲ್ಲಿ ಪ್ರವಾದಿ ಮಹಮ್ಮದರಿಗೆ ಮಾಡಿದ ಅವಮಾನವೆಂದು ಬಿಂಬಿಸುತ್ತಾ ದೇಶಾದ್ಯಂತ ಕಲ್ಲುತೂರಾಟ, ಹಿಂಸಾಚಾರದ ಸಹಿತ ಅನೇಕ ಪ್ರತಿಭಟನೆಗಳಾದವು. ಇಷ್ಟೆಲ್ಲ ಆದ ಬಳಿಕವೂ ನೂಪುರ್ ಶರ್ಮ ತಮ್ಮ ತಪ್ಪು ಎಂದು ಒಪ್ಪಿಕೊಂಡು ಕ್ಷಮೆ ಕೇಳಿದ್ದಾರೆ.

ನೂಪುರ್ ಶರ್ಮ ವಿರುದ್ಧ ಅದೆಷ್ಟು ಅಸಹಿಷ್ಣುಗಳಾಗಿ ಹೋಗಿದ್ದರೆಂದರೆ ಆಕೆ ಕ್ಷಮೆ ಕೇಳಿದ ನಂತರವೂ ಫೋಟೋದ ಮೇಲೆ ಮೂತ್ರ ವಿಸರ್ಜನೆ ಮಾಡಿ, ಆಕೆಯ ಪ್ರತಿಕೃತಿಯನ್ನ ಬೆಳಗಾವಿಯ ಮುಖ್ಯರಸ್ತೆಯಲ್ಲೇ ಸತ್ತಂತೆ ನೇತು ಹಾಕಿದ್ದಲ್ಲದೆ ಆಕೆಯ ಪ್ರಾಣಕ್ಕೂ ಬೆದರಿಕೆ ಒಡ್ಡಲಾಗಿದೆ. ಅಷ್ಟೇ ಅಲ್ಲದೆ ಈ ವಿಚಾರ ಅಂತಾರಾಷ್ಟ್ರೀಯ ಮಟ್ಟದಲ್ಲಿ ಒಂದು ವಿವಾದವಾಗಿ ಮಾರ್ಪಟ್ಟು ಅರಬ್ ದೇಶಗಳೂ ಸೇರಿದಂತೆ ಅನೇಕ ಇಸ್ಲಾಮಿಕ್ ರಾಷ್ಟ್ರಗಳು ನೂಪುರ್ ಶರ್ಮರವರ ಮೇಲೆ ಕ್ರಮ ಕೈಗೊಳ್ಳುವ ಸಲುವಾಗಿ ಭಾರತ ಸರಕಾರದ ಮೇಲೆ ಒತ್ತಡ ಹೇರಲಾಯಿತು.

ನೂಪುರ್ ಶರ್ಮ ಸದ್ಯ ನ್ಯಾಯಾಲಯದ ಮೊಕದ್ದಮೆಯಲ್ಲಿ ಪಾಲ್ಗೊಂಡಿದ್ದಾರೆ. ಅಲ್ಲದೆ ಬಿಜೆಪಿಯು ಅವರನ್ನು ವಕ್ತಾರರ ಸ್ಥಾನದಿಂದ ಅಮಾನತು ಮಾಡಿದೆ. ಇಷ್ಟಾದರೂ ಸಹ ಇಸ್ಲಾಮಿಕ್ ಮನಸ್ಥಿತಿಯ ಜನ ಅರಾಜಕತೆಯನ್ನು ಸೃಷ್ಟಿಸುವುದನ್ನು ಬಿಟ್ಟಿಲ್ಲ. ಶುಕ್ರವಾರದ ನಾಮಾಜಿನ ನಂತರ ಅನೇಕ ಕಡೆಗಳಲ್ಲಿ ದೊಂಬಿ, ಕಲ್ಲು ತೂರಾಟಗಳು ನಡೆಯುತ್ತಲೇ ಇದ್ದವು. ಆದರೆ ಇವೆಲ್ಲವೂ ಕ್ಷಮೆ ಕೇಳಿದ ನಂತರವೂ ನಡೆಯುತ್ತಲೇ ಇದೆ. ಗ್ಲೋಬಲ್ ಪೀಸ್ ಇಂಡೆಕ್ಸ್‌ನ ಪ್ರಕಾರ ಭಾರತ 72ನೇ ಸ್ಥಾನದಲ್ಲಿದ್ದು, 646 ಬಿಲಿಯನ್ ಡಾಲರ್‌ಗಳಷ್ಟು ನಷ್ಟವನ್ನು ಕಂಡಿದೆ. 2020ರಲ್ಲಿ ಭಾರತ ವ್ಯಕ್ತಿಯೊಬ್ಬನ ಮೇಲೆ 841 ಡಾಲರ್‌ಗಳಷ್ಟು ಹಣವನ್ನು ಈ ರೀತಿಯ ಪ್ರತಿಭಟನೆಯಲ್ಲಿ ಕಳೆದುಕೊಂಡಿದೆ.

ಪ್ರತಿಭಟನೆಗಳು ಪ್ರಜಾಪ್ರಭುತ್ವದ ಮೂಲಸೆಲೆಗಳಾಗಿರುವುದೇನೋ ನಿಜ. ಆದರೆ ಅದರ ನಿಜ ಧ್ಯೇಯ ಯಾವುದು ಎನ್ನುವುದರ ಆಧಾರದ ಮೇಲೆ ಅದು ಪ್ರಜಾಪ್ರಭುತ್ವಕ್ಕೆಷ್ಟು ಪೂರಕ ಎನ್ನುವುದು ನಿರ್ಧಾರವಾಗುತ್ತದೆ. ಇತ್ತೀಚೆಗೆ ಇಸ್ಲಾಮಿಕ್ ದಂಗೆಕೋರರು ನಡೆಸುತ್ತಿರುವ ಪ್ರತಿಭಟನೆಗಳು ತಾಳುತ್ತಿರುವ ಉಗ್ರ ರೂಪ ಆಸ್ತಿ ನಷ್ಟ, ಸೃಷ್ಟಿಸುತ್ತಿರುವ ಅರಾಜಕತೆ, ಅದರ ಒಟ್ಟು ಉದ್ದೇಶವನ್ನೇ ತಲೆಕೆಳಗು ಮಾಡುತ್ತಾ ಒಟ್ಟಾರೆಯಾಗಿ ನಷ್ಟವಾಗಬೇಕು ಎಂಬಲ್ಲಿಗೆ ಬಂದು ನಿಂತಿದೆ. ಕ್ಷಮೆ ಕೇಳಿದ ನಂತರವೂ ಪ್ರತಿಭಟನೆ ನಿಲ್ಲಿಸದೆ ತಮ್ಮ ಧ್ಯೇಯದ ಸಾಧನೆಯೋ ಅಥವಾ ಸರಕಾರದ ವಿರುದ್ಧದ ಸಮರವೋ ಎಂಬಲ್ಲಿಗೆ ಈ ಪ್ರತಿಭಟನೆಗಳು ಬಂದು ನಿಂತಿವೆ.

ಆದರೆ ಇಸ್ಲಾಮಿನ ಪ್ರಜ್ಞಾವಂತ ಸಮಾಜ ಈ ಕುರಿತು ತುಟಿಪಿಟಕ್ ಎನ್ನುತ್ತಿಲ್ಲ. ತಮ್ಮದೇ ಸಮಾಜ ಈ ಕೆಳಹಂತಕ್ಕೆ ಹೋಗಿರುವುದನ್ನು ಕುರಿತು ಸಣ್ಣ ಸೊಲ್ಲೆತ್ತುತ್ತಿಲ್ಲ. ಪ್ರಜ್ಞಾವಂತ ಮುಸಲ್ಮಾನರು ಈಗ ಬಾಯಿ ತೆರೆಯದಿದ್ದರೆ ನಾಳೆ ಅವರಿಗೂ ಈ ನಿಲುವು ಆಘಾತಕಾರಿಯಾಗಿ ಪರಿಗಣಿಸಬಲ್ಲದು.


ಒಂದು ಸಮಾಜವಾಗಿ ಇನ್ನಾದರೂ ಭಾರತದ ಸಹವಾಹಸದಿಂದ ಸಹಿಷ್ಣುತೆಯ ಪಾಠವನ್ನು ಕಲಿತು ಸಹಬಾಳ್ವೆಯನ್ನು ಮಾಡಬೇಕಿದೆ. ಆ ಮೂಲಕ ಸೌಹಾರ್ದತೆಯ ನಾಣ್ಯದ ಇನ್ನೊಂದು ಮುಖವೂ



ಮುನ್ನೆಲೆಗೆ ತರಬೇಕಿದೆ. ಕೇವಲ ಒಂದು ರಾಜಕೀಯ ಪಕ್ಷದ ಹೇಳಿಕೆಯಿಂದ ತಮ್ಮ ಮತದ ಬೇರುಗಳು ಸಡಿಲಗೊಳ್ಳಲು ಸಾಧ್ಯವೇ? ಎಂದು ಆ ಸಮಾಜದ ಪ್ರಜ್ಞಾವಂತ ಜನ ಇನ್ನಾದರೂ ಯೋಚಿಸಬೇಕಿದೆ.

## ದೇಶದ ಸುರಕ್ಷತೆಗಾಗಿ ಅಗ್ನಿಪಥ!

ಕೆಲವೇ ದಿನಗಳ ಹಿಂದೆ ರಕ್ಷಣಾ ಮಂತ್ರಿ ಶ್ರೀ ರಾಜನಾಥ ಸಿಂಗ್‌ರವರು ಮತ್ತು ಸೇನೆಯ ಮೂರೂ ಅಂಗಗಳ ಮುಖ್ಯಸ್ಥರು ಸೈನ್ಯಕ್ಕೆ ಅತ್ಯಾವಶ್ಯಕವಾಗಿ ಬೇಕಾಗಿರುವ ಮಹತ್ತರ ಸುಧಾರಣೆಗಳಲ್ಲಿ ಒಂದು ಅಂಶವನ್ನು ಬಿಡುಗಡೆ ಮಾಡಿದರು. ಅದೇ 'ಅಗ್ನಿಪಥ' ಎನ್ನುವ ಯೋಜನೆ. ಸುಮಾರು ಎರಡು ವರ್ಷಗಳ ಚಿಂತನೆ ನಡೆಸಿ, ಹಲವಾರು ದೇಶಗಳ ಮಾದರಿಗಳ ಅಧ್ಯಯನ ನಡೆಸಿ, ಎಲ್ಲಾ ಸಾಧಕ ಬಾಧಕಗಳನ್ನು ಪರಿಶೀಲಿಸಿ ಸೈನ್ಯಕ್ಕೆ, ಯುವಜನತೆಗೆ ಮತ್ತು ನಮ್ಮ ದೇಶಕ್ಕೆ ಒಳಿತಾಗುವ ಉದ್ದೇಶದಿಂದ ಮಾಡಿದ ಯೋಜನೆ ಇದು.




ಕೋವಿಡ್ ಹಿನ್ನೆಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಸೇನಾ ನೇಮಕಾತಿ ಸ್ಥಗಿತಗೊಂಡಿದ್ದು ಸೇನೆಗೆ ತುರ್ತಾಗಿ ಬೇಕಾಗಿರುವ ಸೈನಿಕರ ಅವಶ್ಯಕತೆಯನ್ನು ಪೂರೈಸಲು ಈ ಯೋಜನೆಯಡಿ 46 ಸಾವಿರ 'ಅಗ್ನಿವೀರ'ರನ್ನು ನೇಮಕ ಮಾಡಿಕೊಳ್ಳುವುದಾಗಿ ತಿಳಿಸಿದ್ದಾರೆ. ಇನ್ನು ಮೂರೇ ತಿಂಗಳಲ್ಲಿ ಈ ಯೋಜನೆಗೆ ಚಾಲನೆ ಸಿಗಲಿದ್ದು, ಈ ಯೋಜನೆ ಮೂಲಕ ಸೇನೆ ಸೇರುವ ಯುವಕರು ನಾಲ್ಕು ವರ್ಷ ದೇಶದ ಸೇವೆ ಮಾಡುವ ಅವಕಾಶ ಸಿಗಲಿದೆ.

ಅಗ್ನಿಪಥ್ ಯೋಜನೆಯಡಿ ಭಾರತ ಸೇನೆಗೆ ಅಗ್ನಿವೀರರಾಗಿ ಸೇರಲು ಕನಿಷ್ಠ ಹದಿನೇಳೂವರೆ ವರ್ಷ (17.5) ಆಗಿರಬೇಕು ಮತ್ತು ಗರಿಷ್ಠ 23 ವರ್ಷವಾಗಿರಬೇಕು. ಈ ವಯೋಮಿತಿಯೊಳಗಿನ ಯುವಕರು ಮಾತ್ರ ಈ ಯೋಜನೆಯಡಿಯಲ್ಲಿ ಅಗ್ನಿವೀರರಾಗಿ ಸೇವೆ ಸಲ್ಲಿಸಹುದು. ಅಗ್ನಿಪಥ್ ಯೋಜನೆಯ ಮೂಲಕ ಸಶಸ್ತ್ರಪಡೆಗಳಲ್ಲಿನ ಎಲ್ಲಾ ಸೈನಿಕರು, ನಾವಿಕರು ಮತ್ತು ವಾಯು ಸೈನಿಕರ ನೇಮಕ ನಡೆಯಲಿದೆ.

### ವೇತನ ಎಷ್ಟಿರುತ್ತದೆ?

ಆರಂಭದಲ್ಲಿ ವಾರ್ಷಿಕ 4.62 ಲಕ್ಷ ರೂ. ಪ್ಯಾಕೇಜ್ ವೇತನ ಇರುತ್ತದೆ. ನಾಲ್ಕನೇ ವರ್ಷದ ವೇಳೆಗೆ ವಾರ್ಷಿಕ 6.92 ಲಕ್ಷ ರೂ. ಪ್ಯಾಕೇಜ್ ನೀಡಲಾಗುತ್ತದೆ. ಅಗ್ನಿವೀರರಿಗೆ ಪಿಂಚಣಿ ಸಿಗುವುದಿಲ್ಲ. ಬದಲಿಗೆ 'ಸೇವಾ ನಿಧಿ' (ಅಗ್ನಿವೀರ್ ಕಾರ್ಪಸ್ ಫಂಡ್) ಲಾಭ ಸಿಗಲಿದೆ. ಮಾಸಿಕ ವೇತನದ ಶೇ.30ರಷ್ಟನ್ನು ಈ ನಿಧಿಗೆ ಕಡಿತಗೊಳಿಸಲಾಗುತ್ತದೆ. ಅಷ್ಟೇ ಮೊತ್ತವನ್ನು ಕೇಂದ್ರ ಸರಕಾರ ಪ್ರತಿ ತಿಂಗಳು ಠೇವಣಿ ಇಡಲಿದೆ. ನಾಲ್ಕು ವರ್ಷಗಳ ಸೇವೆಯ ನಂತರ, 'ಸೇವಾ ನಿಧಿ'ಯಲ್ಲಿ ಠೇವಣಿ ಮಾಡಿದ ಮೊತ್ತವನ್ನು ಬಡ್ಡಿಯೊಂದಿಗೆ ಪಾವತಿಸಲಾಗುವುದು. ಅಂದರೆ, 4 ವರ್ಷ ಸೇವೆ ಪೂರೈಸಿದ ನಂತರ ಅಗ್ನಿವೀರರಿಗೆ ಒಂದೇ ಬಾರಿಗೆ ಸುಮಾರು 11 ಲಕ್ಷಕ್ಕೂ ಅಧಿಕ ಮೊತ್ತ ಸಿಗಲಿದೆ. ಇದರೊಂದಿಗೆ ಉಚಿತ ಊಟ ವಸತಿಯ ವ್ಯವಸ್ಥೆ ಇರುತ್ತದೆ.

### ನೇಮಕಾತಿ ಪ್ರಕ್ರಿಯೆ ಹೇಗಿರುತ್ತದೆ?

ದೇಶಾದ್ಯಂತ ಏಕರೂಪ ಪರೀಕ್ಷೆ ಮೂಲಕ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ಉತ್ತೀರ್ಣರಾದವರಿಗೆ ಆರು ತಿಂಗಳ ತರಬೇತಿ ನೀಡಿ ಅರ್ಹತೆ ಮೇರೆಗೆ ನೇಮಿಸಿಕೊಳ್ಳಲಾಗುತ್ತದೆ. ತರಬೇತಿ ಸಂದರ್ಭದಲ್ಲಿಯೂ ಸಂಬಳ ನೀಡಲಾಗುತ್ತದೆ. ಅಗ್ನಿವೀರರಿಗೆ ಹೆಚ್ಚು ತಾಂತ್ರಿಕ ವಾತಾವರಣದಲ್ಲಿ ತರಬೇತಿ ನೀಡಲಾಗುತ್ತದೆ. ತರಬೇತಿ ಅವಧಿ ಸೇರಿದಂತೆ ಅವರ ಒಟ್ಟು ಸೇವೆಯು ನಾಲ್ಕು ವರ್ಷಗಳಾಗಿರುತ್ತದೆ.

### ಸಾಧಕಗಳೇನು?

ವೈಯಕ್ತಿಕವಾಗಿ ಈ ಯೋಜನೆ ವಿಶೇಶವಾಗಿ ವಿದ್ಯಾಭ್ಯಾಸ ಮುಂದುವರೆಸಲಾಗದ ಬಡ ಕುಟುಂಬದ, ಗ್ರಾಮೀಣ ಪ್ರದೇಶದ ಯುವಕರಿಗೆ ವರದಾನವಾಗಿ ಪರಿಣಮಿಸಲಾಗುವುದು. ಸೈನ್ಯದ ಶಿಸ್ತಿನ ತರಬೇತಿ ಮತ್ತು ಅಲ್ಲಿನ ಜೀವನ ಶೈಲಿ ಈ ಮುಗ್ಧ ಬಾಲಕರನ್ನು ಹೋರಾಟದ ಗಂಡುಗಲಿಗಳನ್ನಾಗಿ ಪರಿವರ್ತಿಸಲಿದೆ. ಈ ನಾಲ್ಕು ವರ್ಷಗಳ ಅವಧಿಯಲ್ಲಿ ಅವರ ದೈಹಿಕ ಮತ್ತು ಮಾನಸಿಕ ಬೆಳವಣಿಗೆ ಕಾಲೇಜುಗಳಲ್ಲಿ ಓದುತ್ತಿರುವ ಅವರ ಮಿತ್ರರಿಗಿಂತ ಸದೃಢವಾಗಿರುತ್ತದೆ. ದೇಶ ಸುತ್ತುವ ಕೋಶ ಓದುವ ಮುಕ್ತ ಅವಕಾಶ ಇವರಿಗೆ ಸಿಗಲಿದೆ. ದೇಶದಲ್ಲಿರುವ ಹಲವಾರು ಮುಕ್ತ ವಿಶ್ವವಿದ್ಯಾಲಯಗಳ ಮೂಲಕ ಇವರು ವ್ಯಾಸಂಗವನ್ನೂ ಮುಂದುವರೆಸಬಹುದು. ನಾಲ್ಕು ವರ್ಷಗಳಲ್ಲಿ ಇವರು ಪಡೆಯುವ ಅನುಭವ. ವೃತ್ತಿ ಪರಿಣಿತಿ ಮತ್ತು ಸಂದಿಗ್ಧ ಪರಿಸ್ಥಿತಿಗಳ ನಿರ್ವಹಣೆ ಇವರನ್ನು ಎಂಥಹ ಕಠಿಣ ಪರಿಸ್ಥಿತಿಯನ್ನಾದರೂ ಎದುರಿಸಿ ಜಯಿಸುವ

4ನೇ ಪುಟಕ್ಕೆ...

## ಸಂಸ್ಮರಣೆ | ಯಾಜ್ಞವಲ್ಕ್ಯ

ಯಾಜ್ಞವಲ್ಕ್ಯರು ಬ್ರಹ್ಮರ್ಷಿಗಳು ಸ್ಮೃತಿಕಾರರು. ಇವರು ವೈಶಂಪಾಯನ ಮಹರ್ಷಿಗಳ ಸೋದರಳಿಯ ಹಾಗೂ ಶಿಷ್ಯರು. ತಂದೆ ಬ್ರಹ್ಮರಾತರು. ಮಹಾ ವಿದ್ವಾಂಸರಾದ ಯಾಜ್ಞವಲ್ಕ್ಯರು ವಾದದಲ್ಲಿ  ಅಸಾಮಾನ್ಯರಾಗಿದ್ದರಂತೆ. ಹೀಗೆ ಅವರು ಅಪಾರ ಸಂಪತ್ತು ಮತ್ತು ಕೀರ್ತಿಯನ್ನೂ ಗಳಿಸಿದ್ದರು. ಬ್ರಹ್ಮವಿದ್ಯೆಯ ವಿಷಯವಾಗಿ ಜನಕರಾಜನೊಂದಿಗೆ ಚರ್ಚಿಸಿ ವಿಶೇಷವಾಗಿ ಮನ್ನಣೆ ಪಡೆದರು.

ಯಾಜ್ಞವಲ್ಕ್ಯರಿಗೆ ಕಾತ್ಯಾಯಿನಿ ಮತ್ತು ಮೈತ್ರೇಯಿ ಎಂಬ ಇಬ್ಬರು ಪತ್ನಿಯರಿದ್ದರು. ಅವರ ಮಡದಿ ಮೈತ್ರೇಯಿ ಆ ಕಾಲದ ಪ್ರಖ್ಯಾತ ಬ್ರಹ್ಮವಾದಿನಿಯಾಗಿದ್ದರು. ಆಕೆ ಪತಿಯೊಡನೆ ಆತ್ಮತತ್ತ್ವ ಜಿಜ್ಞಾಸೆಗೆ ಉಪಕ್ರಮಿಸಿದ್ದು ಬೃಹದಾರಣ್ಯಕೋಪನಿಷತ್ತಿನಲ್ಲಿ ಮೂಡಿದೆ. ಇದರಲ್ಲಿ ಯಾಜ್ಞವಲ್ಕ್ಯರ ಆತ್ಮತತ್ತ್ವ ಬೋಧೆ ಹೃದಯಂಗಮವಾಗಿ ಪ್ರಕಟಗೊಂಡಿದೆ. ಅಧ್ಯಾತ್ಮವಿದ್ಯೆಯಂತಹ ಶ್ರೇಷ್ಠ ಅಸಾಧಾರಣ ಬ್ರಹ್ಮವಿದ್ಯೆಯನ್ನು ತಮ್ಮ ಪತ್ನಿ ಮೈತ್ರೇಯಿಗೆ ಬೋಧಿಸಿ, ಸ್ತ್ರೀಯರೂ ಬ್ರಹ್ಮಜ್ಞಾನ ಪಡೆಯಲು ಅರ್ಹರು ಎಂದು ಸಾರಿದರು.  ಗಾರ್ಗಿ ಎಂಬ ಮಹಾನ್ ಸಾಧಕಿಯ ಜೊತೆಯಲ್ಲಿ ಸಹಾ ಇವರು ಆಧ್ಯಾತ್ಮ ಚರ್ಚೆಯಲ್ಲಿ ಪಾಲ್ಗೊಂಡ ವಿಷಯಗಳು ಪುರಾಣಗಳಲ್ಲಿ ಕಾಣಬರುತ್ತವೆ.

ಗಾರ್ಗೀ ಸತತ ಅಧ್ಯಯನ – ಅಭ್ಯಾಸಗಳಿಂದ ಶಾಸ್ತ್ರಾರ್ಥದಲ್ಲಿ ವಿಶೇಷಾಧಿಕಾರ ಹೊಂದಿದ್ದಳು. ಪ್ರಾಶ್ನಿಕ ಬುದ್ಧಿಯವಳಾಗಿದ್ದ ಆಕೆ, ಪ್ರತಿಯೊಂದನ್ನೂ ಪ್ರಶ್ನಿಸಿ, ಪರಾಂಬರಿಸಿ ಅಧ್ಯಯನ ನಡೆಸುತ್ತಿದ್ದಳು. ಹಾಗೆಂದೇ ರಾಜರ್ಷಿ ಜನಕ ಮಹಾರಾಜ ತಾನು ಕೈಕೊಂಡ ಯಜ್ಞ ಪೂರ್ತಿಯಾದ ಅನಂತರ ಏರ್ಪಡಿಸಿದ್ದ ಬ್ರಹ್ಮ ಸಭೆಗೆ ಗಾರ್ಗಿಯನ್ನೂ ಆಹ್ವಾನಿಸಿದ್ದು.

ಜನಕ ರಾಜನು ಏರ್ಪಡಿಸಿದ್ದ ಬ್ರಹ್ಮ ಸಭೆಯಲ್ಲಿ ಕುರು, ಪಾಂಚಾಲ ಇತ್ಯಾದಿ ಅನೇಕ ದೇಶಗಳ ಬ್ರಾಹ್ಮಣ ವಿದ್ವಾಂಸರು ಸೇರಿದ್ದರು. ಸ್ವತಃ ಪಂಡಿತನೂ, ವಿದ್ವಾಂಸನೂ, ಜ್ಞಾನಿಯೂ ಆಗಿದ್ದ ಜನಕನ ಮನಸ್ಸಿನಲ್ಲಿ ಅಲ್ಲಿ ಬಂದಿರುವವರಲ್ಲಿ ಎಲ್ಲರಿಗಿಂತ ಹೆಚ್ಚು ತತ್ತ್ವವೇತ್ತ ಹಾಗೂ ಪಂಡಿತರು ಯಾರಾಗಿರಬಹುದು ಎಂಬುದನ್ನು ಕಂಡುಹಿಡಿಯಬೇಕೆನ್ನುವ ಅಭಿಲಾಷೆ ಹುಟ್ಟಿತು. ಇದಕ್ಕಾಗಿ ಗೋಶಾಲೆಯಲ್ಲಿನ ಒಂದು ಸಾವಿರ ಗೋವುಗಳನ್ನು ಪಣವಾಗಿಟ್ಟನು. ಅವುಗಳಲ್ಲಿ ಪ್ರತಿಯೊಂದು ಹಸುವಿನ ಪ್ರತಿಯೊಂದು ಕೊಂಬಿಗೂ ಹತ್ತು ಸುವರ್ಣಗಳನ್ನು ಕಟ್ಟಿಸಿದನು ಹಾಗೂ 'ನಿಮ್ಮಲ್ಲಿ ಯಾರು ಅತ್ಯಂತ ದೊಡ್ಡ ಬ್ರಹ್ಮವೇತ್ತರೋ ಅವರು ಈ ಎಲ್ಲ ಗೋವುಗಳನ್ನೂ ತೆಗೆದುಕೊಂಡು ಹೋಗಬಹುದು' ಎಂದು ಘೋಷಿಸಿದನು.

ಆದರೆ ಆ ಗೋವುಗಳನ್ನು ತೆಗೆದುಕೊಳ್ಳಲು ಯಾರೂ ಮುಂದೆ ಬರಲಿಲ್ಲ. ಹಾಗೆ ಮುಂದೆ ಬಂದವರು ಅಷ್ಟೂ ಜನರನ್ನು ವಾದದಲ್ಲಿ, ಶಾಸ್ತ್ರಾರ್ಥದಲ್ಲಿ ಗೆಲ್ಲಬೇಕು.  ಇದನ್ನು ಗಮನಿಸಿದ ಯಾಜ್ಞವಲ್ಕ್ಯರು, 'ಆ ಹಸುಗಳನ್ನೆಲ್ಲ ತೆಗೆದುಕೊಂಡು ನಡೆ!' ಎಂದು ಸಾಮವೇದಾಧ್ಯಯನಿಯಾದ ತಮ್ಮ ಶಿಷ್ಯ ಸೋಮದೇವನಿಗೆ ಹೇಳಿದರು. ಇದನ್ನು ಆಲಿಸಿದ ಬ್ರಾಹ್ಮಣವರ್ಗದವರೆಲ್ಲರೂ ಕ್ಷುಬ್ಧರಾದರು.

ಆಗ ವಿದೇಹ ರಾಜನ ಪುರೋಹಿತನಾದ ಅಶ್ವಲನು, 'ತಾವು ಎಲ್ಲರಿಗಿಂತಲೂ ಹೆಚ್ಚು ಬ್ರಹ್ಮವೇತ್ತರೊ?' ಎಂದು ಯಾಜ್ಞವಲ್ಕ್ಯರನ್ನು ಕೇಳಿದನು. ಆತ ನಮ್ರತೆಯಿಂದ, 'ಇಲ್ಲಿನ ಬ್ರಹ್ಮವೇತ್ತರಿಗೆಲ್ಲ ವಂದಿಸುತ್ತೇನೆ. ನನಗೆ ಹಸುಗಳ ಆವಶ್ಯಕತೆ ಇದೆ. ಆದ್ದರಿಂದ ತೆಗೆದುಕೊಂಡು ಹೋಗುತ್ತಿದ್ದೇನೆ. ಇಲ್ಲಿ ನನ್ನನ್ನು ಶಾಸ್ತ್ರಾರ್ಥದಲ್ಲಿ ಸೋಲಿಸಬಲ್ಲವರಿದ್ದರೆ ತಡೆಯಬಹುದು' ಎಂದು ಹೇಳಿದರು.

ಯಾಜ್ಞವಲ್ಕ್ಯರು ಮಾತು ಮುಗಿಸುತ್ತಲೇ ಹಸುಗಳನ್ನು ಕೊಂಡೊಯ್ಯಲು ಅವರ ಯೋಗ್ಯತೆಯನ್ನು ನಿರ್ಣಯಿಸುವ ಶಾಸ್ತ್ರಾರ್ಥ ಪ್ರಾರಂಭ ಆಗಿಯೇಬಿಟ್ಟಿತು. ಗಾರ್ಗಿಯು ಅದನ್ನು ತಡೆಯುತ್ತ ಎದ್ದು ನಿಂತು, ತಾನು ಕೆಲವು ಪ್ರಶ್ನೆಗಳನ್ನು ಕೇಳುವುದಿದೆ ಎಂದಳು. ಇಡಿಯ ಬ್ರಹ್ಮ ಸಭೆ ಅವಾಕ್ಕಾಯಿತು. ಮಹಾಜ್ಞಾನಿ ಯಾಜ್ಞವಲ್ಕ್ಯರನ್ನು ಓರ್ವ ಸ್ತ್ರೀಯು ಪ್ರಶ್ನಿಸುವುದೆ? ಅವರೆದುರು ನಿಂತು ವಾದ ಮಾಡುವುದೆ?' ಎಂದು ತಮ್ಮತಮ್ಮಲ್ಲೆ ಮಾತಾಡಿಕೊಂಡರು.

ಗಾರ್ಗಿ ಬುದ್ಧಿವಂತೆ. ಆಕೆ ಕೇವಲ ಪ್ರಶ್ನಿಸುವ ಚಪಲದಿಂದ ಎದ್ದು ನಿಲ್ಲಲಿಲ್ಲ. ಮಹಾಜ್ಞಾನಿಯಾಗಿದ್ದ ಯಾಜ್ಞವಲ್ಕ್ಯರಿಂದ ಕೆಲವು ಅಮೂಲ್ಯ ಸಂಗತಿಗಳನ್ನು ತಿಳಿಯಲು ಅದೊಂದು ಸದವಕಾಶವೆಂದು ಅವಳು ಭಾವಿಸಿದಳು. ಹಾಗೆಂದೇ ತಾನು ಚಿಂತನೆ ನಡೆಸುತ್ತಿದ್ದ ಅಸ್ತಿತ್ವ ಮೂಲದ ವಿಷಯದ ಬಗ್ಗೆ ಯಾಜ್ಞವಲ್ಕ್ಯರ ವ್ಯಾಖ್ಯಾನವನ್ನು ಕೇಳಿ ತಿಳಿಯಲು ಅವಳು ಬಯಸಿದ್ದಳು. ಗಾರ್ಗಿಯು ಯಾವುದೇ ಅಳುಕಿಲ್ಲದೆ ಪ್ರಶ್ನೆಗಳನ್ನು ಕೇಳಲಾರಂಭಿಸಿದಳು. 'ಈ ಪಾರ್ಥಿವ



ಪದಾರ್ಥಗಳೆಲ್ಲವೂ ನೀರಿನಲ್ಲಿ ಹಾಸುಹೊಕ್ಕಾಗಿವೆ. ಆದರೆ ನೀರು ಯಾವುದರಲ್ಲಿ ಹಾಸು ಹೊಕ್ಕಾಗಿದೆ?' ಎಂದು ಪ್ರಶ್ನಿಸಿದಳು.

'ನೀರು ವಾಯುವಿನಲ್ಲಿ ಹಾಸುಹೊಕ್ಕಾಗಿದೆ' ಎಂದು ಯಾಜ್ಞವಲ್ಕ್ಯರು ಉತ್ತರಿಸಿದರು. ಈ ರೀತಿ ಮುಂದುವರಿದ ವಾದ–ಪ್ರತಿವಾದಗಳು ವಾಯು, ಆಕಾಶ, ಅಂತರಿಕ್ಷ, ಗಂಧರ್ವಲೋಕ, ಆದಿತ್ಯಲೋಕ, ಚಂದ್ರಲೋಕ, ನಕ್ಷತ್ರಲೋಕ, ದೇವಲೋಕ, ಇಂದ್ರಲೋಕ, ಪ್ರಜಾಪತಿಲೋಕಗಳಿಗೆ ಸಂಬಂಧಪಟ್ಟ ಪ್ರಶ್ನೋತ್ತರಗಳಾದವು. ಯಾಜ್ಞವಲ್ಕ್ಯರು ಗಾರ್ಗಿಯಲ್ಲಿರುವ ಬ್ರಹ್ಮಜ್ಞಾನವನ್ನು ಗುರ್ತಿಸಿದರು. ಅಂತೆಯೇ ತಾವೂ ಅವಳನ್ನು ಬಹಳವಾಗಿ ಪ್ರಶ್ನಿಸಿದರು.

'ಬ್ರಹ್ಮಲೋಕವು ಯಾವುದರಲ್ಲಿ ಸಮ್ಮಿಳಿತವಾಗಿದೆ?' ಎಂದು ಗಾರ್ಗೀ ಪಟ್ಟು ಹಿಡಿದವಳಂತೆ ಕೇಳಿದಳು.

'ಗಾರ್ಗೀ, ಇದೊಂದು ಅತೀತ ಪ್ರಶ್ನೆ. ಇದು ಉತ್ತರ ನೀಡುವುದರ ಎಲ್ಲೆಯಾಗಿದೆ. ಇದರಾಚೆ ಯಾವ ಪ್ರಶ್ನೆಯೂ ಬರಬಾರದು. ಹಾಗೆ ಮಾಡಿದ್ದೇ ಆದರೆ ನಿನ್ನ ತಲೆಯೂ ಛಿದ್ರವಾಗುವುದು.' ಎನ್ನುತ್ತಾರೆ. ಆದರೆ ಸಭೆಗೆ ಉತ್ತರಿಸಲೇಬೇಕಿರುವುದು ಅನಿವಾರ್ಯವಾಗಿದ್ದರಿಂದ ಬ್ರಹ್ಮ ಯಾವುದು ಎಂದು ವಿವರಿಸುವುದಕ್ಕೆ ನೇತಿ–ನೇತಿ ವಿಧಾನವನ್ನು ಅನುಸರಿಸುತ್ತಾರೆ. ಅಂದರೆ ಯಾವುದೆಲ್ಲ ಬ್ರಹ್ಮ ಅಲ್ಲ ಎಂದು ಹೇಳುತ್ತಾ ಹೋಗುತ್ತಾರೆ. 'ಸ್ಥೂಲವಾಗಿ ಬ್ರಹ್ಮ ಆಕಾಶವಲ್ಲ, ಭೂಮಿಯೂ ಅಲ್ಲ; ನೀರು ಅಲ್ಲ, ಘನವೂ ಅಲ್ಲ; ಗಾಳಿಯೂ ಅಲ್ಲ, ನೀರವವೂ ಅಲ್ಲ; ಬೆಳಕೂ ಅಲ್ಲ, ಕತ್ತಲೆಯೂ ಅಲ್ಲ; ಶಬ್ದವೂ ಅಲ್ಲ, ನಿಶ್ಶಬ್ದವೂ ಅಲ್ಲ; ಆಕಾರವೂ ಅಲ್ಲ ನಿರಾಕಾರವೂ ಅಲ್ಲ; ಅದಲ್ಲ, ಇದೂ ಅಲ್ಲ' ಎಂದು ಉತ್ತರಿಸುತ್ತಾರೆ.

ಅಲ್ಪಜ್ಞರಿಗೆ ಈ ಉತ್ತರ ಅಧಿಕಪ್ರಸಂಗದ್ದಾಗಿ ಕಂಡರೂ ವಿದುಷಿಯಾದ ಗಾರ್ಗಿಯು ಯಾಜ್ಞವಲ್ಕ್ಯರ ಒಳ ಅಭಿಪ್ರಾಯವನ್ನು ಅರಿತಳು. ಬ್ರಹ್ಮವನ್ನು ನಿರೂಪಿಸಲು ಬಾರದು. ಹಾಗೊಮ್ಮೆ ಅದನ್ನು ಹೇಳಿದ್ದು – ಕೇಳಿದ್ದೇ ಆದರೆ, ಆ ತಿಳಿವಳಿಕೆಯು ಆತ್ಮವನ್ನು ದೇಹದಲ್ಲಿ ಬಹಳ ಕಾಲ ಬಂಧಿಯಾಗಿರಲು ಬಿಡಲಾರದು ಅನ್ನುವುದು ಅವರ ಉತ್ತರದ ಅಂತರಾರ್ಥವಾಗಿತ್ತು. ಅದನ್ನರಿತ ಗಾರ್ಗಿಯು ಸುಮ್ಮನಾಗುತ್ತಾಳೆ.

ಅವಳ ಅನಂತರ, ಏಳನೆಯವನಾಗಿ ಪ್ರಶ್ನಿಸಿದ ಉದ್ದಾಲಕನು ಸೋತುಹೋಗುತ್ತಾನೆ. ಆಗ ಗಾರ್ಗಿಯು ತಡೆಯಲಾರದೆ, ಬ್ರಹ್ಮಸಭೆಯ ಅಪ್ಪಣೆಯೊಂದಿಗೆ ಮತ್ತೆರಡು ಪ್ರಶ್ನೆಗಳನ್ನು ಕೇಳುತ್ತಾಳೆ. ಸ್ವರ್ಗ – ಮರ್ತ್ಯಗಳನ್ನು ಸದಾಕಾಲವೂ ಆವರಿಸಿದ್ದು ಯಾವುದು ಎಂಬ ಪ್ರಶ್ನೆಗೆ ಯಾಜ್ಞವಲ್ಕ್ಯನಿಂದ ಆಕಾಶವೆಂಬ ಉತ್ತರ ಸಿಗುತ್ತದೆ. 'ಆಕಾಶವನ್ನು ಆವರಿಸಿದ್ದು ಯಾವುದು?' ಎಂದು ಕೇಳುತ್ತಾಳೆ ಗಾರ್ಗೀ.

ಆಗ ಯಾಜ್ಞವಲ್ಕ್ಯನು, 'ಆಕಾಶವನ್ನು ಯಾವುದು ತಾನೇ ಆವರಿಸಬಲ್ಲದು?' ಎಂದು ಮರುಪ್ರಶ್ನೆ ಹಾಕುತ್ತಾ, 'ಆಕಾಶ ಎಲ್ಲದರಲ್ಲಿದ್ದು ಎಲ್ಲವನ್ನೂ ಮೀರಿದ್ದು, ಬ್ರಹ್ಮನನ್ನು ಸಂಪೂರ್ಣವಾಗಿ ಅರಿಯುವುದು ಯಾರಿಂದಲೂ ಎಂದಿಗೂ ಸಾಧ್ಯವಿಲ್ಲ' ಎಂದು ಉತ್ತರಿಸುತ್ತಾನೆ. ಯಾಜ್ಞವಲ್ಕ್ಯನ ಉತ್ತರದಿಂದ ಗಾರ್ಗೀ ಸಂತೃಪ್ತಿ ಹೊಂದಿ ಯಾಜ್ಞವಲ್ಕ್ಯನನ್ನು ಬ್ರಹ್ಮಿಷ್ಠನೆಂದು ಮನ್ನಿಸಲು ಸಭೆಯನ್ನು ಕೇಳಿಕೊಳ್ಳುತ್ತಾಳೆ.

ಯಾಜ್ಞವಲ್ಕ್ಯರು ಬರೆದ ಸ್ಮೃತಿ 'ಯಾಜ್ಞವಲ್ಕ್ಯ ಸ್ಮೃತಿ' ಎಂದು ಹೆಸರಾಗಿದೆ. ಈ ಅರ್ಥದಲ್ಲಿ ಯಾಜ್ಞವಲ್ಕ್ಯರು ಆ ಕಾಲದ ಸ್ಮೃತಿಕಾರ ಅಥವಾ ಸಮಾಜ ಶಾಸ್ತ್ರಜ್ಞ. ಶತಪಥ ಬ್ರಾಹ್ಮಣ, ಯೋಗಯಾಜ್ಞವಲ್ಕ್ಯ ಮತ್ತು ಸಂಹಿತ ಇವರ ಇತರ ಕೃತಿಗಳು.

## ಎಲ್ಲೋ ಕೇಳಿದ ಕಥೆ

ಒಮ್ಮೆ ಒಬ್ಬ ಸಮುದ್ರವನ್ನು ದಾಟಬೇಕಿತ್ತು. ಹಡಗು, ದೋಣಿಯಂಥಾ ಯಾವ ಸಾಧನವೂ ಲಭ್ಯವಿರಲಿಲ್ಲ. ಸಮುದ್ರ ದಡದಲ್ಲಿ ನಿಂತು ಅವನು ಯೋಚಿಸುತ್ತ ದುಃಖಿಸುತ್ತಿದ್ದ.

ಅದೇ ವೇಳೆಗೆ ಜಾಂಬವಂತ ಅಲ್ಲಿಗೆ ಬಂದ. "ಯಾಕೆ ದುಃಖದಲ್ಲಿದ್ದೀಯ?" ಎಂದು ಪ್ರಶ್ನಿಸಿದ.

"ನಾನು ಈ ಸಮುದ್ರವನ್ನು ದಾಟಬೇಕಿದೆ. ಯಾವ ನೌಕೆಯೂ ಇಲ್ಲವೆಂದು ಬೇಸರವಾಗಿದೆ" ಅಂದ ಆ ವ್ಯಕ್ತಿ.

ಜಾಂಬವಂತ ಅವನ ಮೇಲೆ ಅನುಕಂಪವಿಟ್ಟು, ಎಲೆಯೊಂದರಲ್ಲಿ ಒಂದು ಮಂತ್ರ ಬರೆದು, ಅದನ್ನು ಮಡಚಿ ಅವನ ಕೈಗೆ ಕೊಟ್ಟ.

"ನೋಡು! ಇದನ್ನು ಭದ್ರವಾಗಿಟ್ಟುಕೋ. ಇದರೊಳಗೆ ಮಂತ್ರವಿದೆ. ಈ ಮಂತ್ರದ ಶಕ್ತಿ ನಿನ್ನನ್ನು ಸಮುದ್ರ ದಾಟಿಸುತ್ತದೆ." ಅಂದ.


ಆ ವ್ಯಕ್ತಿ ಎಲೆಯನ್ನು ಭದ್ರವಾಗಿ ಹಿಡಿದುಕೊಂಡು, ಮಂತ್ರದ ಮೇಲಿನ ಶ್ರದ್ಧೆಯಿಂದ ಸಮುದ್ರದ ಮೇಲೆ ನಡೆಯತೊಡಗಿದ. ಯಾವ ಅಡ್ಡಿಯೂ ಇಲ್ಲದೆ ಸಾಗುತ್ತಿದ್ದ ಅವನಿಗೆ, ಮಾರ್ಗ ಮಧ್ಯದಲ್ಲಿ ಆ ಎಲೆಯೊಳಗೆ ಏನು ಬರೆದಿರಬಹುದು ಎಂಬ ಕುತೂಹಲ ಹುಟ್ಟಿತು. ತೆರೆದು ನೋಡೇಬಿಡೋಣ ಎಂದು ಕೊಂಡ.

ನೋಡಿದರೆ, ಅದರಲ್ಲಿ 'ಶ್ರೀ ರಾಮ' ಎಂದಷ್ಟೇ ಬರೆದಿತ್ತು!

"ಅಯ್ಯೋ, ಇಷ್ಟೆಯೇ ಇದರಲ್ಲಿರುವುದು! ನಾನೇನೋ ಭಾರೀ ರಹಸ್ಯ ಮಂತ್ರ ಬರೆದಿದ್ದಾರೆ ಅಂದುಕೊಂಡಿದ್ದರೆ ಬರೀ ರಾಮನಾಮವೇ!?" ಅಂದುಕೊಂಡ.

ಅವನು ಹಾಗೆ ಅಂದುಕೊಂಡ ಕೂಡಲೇ ಸಮುದ್ರದ ಮೇಲಿನ ನಡಿಗೆಯ ಸಮತೋಲನ ತಪ್ಪಿ ನೀರಿನಲ್ಲಿ ಮುಳುಗಿಹೋದ.

## ರಾಷ್ಟ್ರ ತಪಸ್ವಿ ಶ್ರೀ ಗುರೂಜಿ




ಪುಸ್ತಕ ಪರಿಚಯ

ಲೇಖಕರು:
ರಂಗಾ ಹರಿ

ಅನುವಾದಕರು:
ಚಂದ್ರಶೇಖರ ಭಂಡಾರಿ

ಪ್ರಕಾಶಕರು:
ಸಾಹಿತ್ಯ ಸಿಂಧು ಪ್ರಕಾಶನ

ಬೆಲೆ:
600/–

ಪುಟ:
xiv +726

ರಾಷ್ಟ್ರೀಯ ಸ್ವಯಂಸೇವಕ ಸಂಘದ ಎರಡನೆಯ ಸರಸಂಘಚಾಲಕರಾದ ಶ್ರೀ ಮಾಧವ ಸದಾಶಿವರಾವ್ ಗೋಳ್ವಲ್ಕರ್ ಅವರ ಕುರಿತಾದ ಅತ್ಯಂತ ವಿಸ್ತತವಾದ ಜೀವನ ಚರಿತ್ರೆ ರಾಷ್ಟ್ರತಪಸ್ವಿ ಶ್ರೀ ಗುರೂಜಿ ಪುಸ್ತಕ. ಮೂಲದಲ್ಲಿ ಹಿಂದಿಯ ಕೃತಿಯಾದ ಇದನ್ನು ಹಿರಿಯ ಸ್ವಯಂಸೇವಕರಾದ ಶ್ರೀ ರಂಗಾಹರಿಯವರು ಮೊದಲು ಮಲೆಯಾಳಂನಲ್ಲೂ, ನಂತರ ಹಿಂದಿಯಲ್ಲೂ ಪ್ರಕಟಿಸಿದರು. ಸಂಘದ ಸ್ವಯಂಸೇವಕರಿಗೆ ಗುರೂಜಿಯವರ ಜೀವನದೃಷ್ಟಿ ಮತ್ತು ಚಿಂತನೆಗಳ ಸಮಗ್ರವಾದ ಪರಿಪೇಕ್ಷ ದೊರೆಯುವ ರೀತಿಯಲ್ಲಿ ಈ ಪುಸ್ತಕವು ಮೂಡಿಬಂದಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್, ಸುನಿಲ್ ಕುಲಕರ್ಣಿ, ಅಶೋಕ್ ಗೌಡ

## ಸಾಲುದ್ದದ ಸುದ್ದಿಗಳು

### ಸಂವಾದ ಪತ್ರಕರ್ತನ ಮೇಲೆ ಹಲ್ಲೆ: ರಾಜ್ಯಾದ್ಯಂತ ಖಂಡನೆ

ಬೆಂಗಳೂರಿನ ಫ್ರೀಡಂ ಪಾರ್ಕ್ ಬಳಿ ನಡೆದ ಸಾರ್ವಜನಿಕ ಕಾರ್ಯಕ್ರಮವೊಂದನ್ನು ವರದಿ ಮಾಡಲು ತೆರಳಿದ್ದ ಸಂವಾದ ಪತ್ರಕರ್ತ ತೇಜನ ಮೇಲೆ ಕೆಲವು ಕಿಡಿಗೇಡಿಗಳು ಹಲ್ಲೆ ನಡೆಸಿದ್ದಾರೆ. ಈ ಘಟನೆಗೆ ರಾಜ್ಯಾದ್ಯಂತ ಖಂಡನೆಗಳು ವ್ಯಕ್ತವಾಗಿದೆ. ಕಾರ್ಯಕ್ರಮವನ್ನು ವರದಿ ಮಾಡುತ್ತಿದ್ದ ವೇಳೆ ಕೆಲವು ಗೂಂಡಾಗಳು ಅವರನ್ನು ನಿಂದಿಸಿ ಅವರ ಮೇಲೆ ಹಲ್ಲೆ ನಡೆಸಿದ್ದಾರೆ.

ಈ ಬಗ್ಗೆ ಟ್ವೀಟ್ ಮಾಡಿರುವ ಗೃಹ ಸಚಿವ ಅರಗ ಜ್ಞಾನೇಂದ್ರ ಅವರು, "ಫ್ರೀಡಂ ಪಾರ್ಕ್ ಬಳಿ ನಡೆದ ಕಾರ್ಯಕ್ರಮವನ್ನು ವರದಿ ಮಾಡಲು ತೆರಳಿದ್ದ ಪತ್ರಕರ್ತರೊಬ್ಬರಿಗೆ ಅಮಾನುಷವಾಗಿ ಹಲ್ಲೆ ಮಾಡಿದ ಘಟನೆ ಖಂಡನೀಯ. ಪ್ರಜಾಪ್ರಭುತ್ವ ಹಾಗೂ ಪತ್ರಿಕಾ ಸ್ವಾತಂತ್ರ್ಯ ವಿರೋಧಿ ಮನಸ್ಥಿತಿಯ ವ್ಯಕ್ತಿಗಳ ಕುಮ್ಮಕ್ಕಿನಿಂದ ನಡೆದ ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಲಾಗಿದ್ದು ಸೂಕ್ತ ಕಾನೂನು ಕ್ರಮ ಜರುಗಿಸುತ್ತೇವೆ" ಎಂದಿದ್ದಾರೆ.



### ವರ್ಷಾಂತ್ಯದಲ್ಲಿ ಜಮ್ಮು-ಕಾಶ್ಮೀರದಲ್ಲಿ ಚುನಾವಣೆ ಸಾಧ್ಯತೆ: ರಾಜನಾಥ್

ಈ ವರ್ಷಾಂತ್ಯದೊಳಗೆ ಜಮ್ಮು ಮತ್ತು ಕಾಶ್ಮೀರದಲ್ಲಿ ವಿಧಾನಸಭಾ ಚುನಾವಣೆ ನಡೆಸುವ ಬಲವಾದ ಸಾಧ್ಯತೆಯಿದೆ ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಹೇಳಿದ್ದಾರೆ.

"ಇತ್ತೀಚೆಗೆ ಡಿಲಿಮಿಟೇಶನ್ ಪ್ರಕ್ರಿಯೆ ಪೂರ್ಣಗೊಂಡಿದೆ. ಈ ಹಿಂದೆ ಜಮ್ಮು ಪ್ರದೇಶದಲ್ಲಿ 37 ವಿಧಾನಸಭಾ ಸ್ಥಾನಗಳು ಇತ್ತು ಮತ್ತು ಕಾಶ್ಮೀರ 46 ಸ್ಥಾನಗಳನ್ನು ಹೊಂದಿತ್ತು. ಆದರೆ ಈಗ 90 ಸ್ಥಾನಗಳನ್ನು ಹೊಂದಿರುವ ಹೊಸ ವಿಧಾನಸಭೆಯಲ್ಲಿ ಜಮ್ಮು 43 ಮತ್ತು ಕಾಶ್ಮೀರ 47 ಸ್ಥಾನಗಳನ್ನು ಹೊಂದಿದೆ. ಈ ವರ್ಷದ ಅಂತ್ಯದ ವೇಳೆಗೆ ಚುನಾವಣಾ ಪ್ರಕ್ರಿಯೆಯು ಪ್ರಾರಂಭವಾಗಲಿದೆ ಎಂದು ನಾನು ಭಾವಿಸುತ್ತೇನೆ" ಅವರು ಮಹಾರಾಜ ಗುಲಾಬ್ ಸಿಂಗ್ ಅವರ ಪಟ್ಟಾಭಿಷೇಕದ 200 ನೇ ವರ್ಷವನ್ನು ಆಚರಿಸಲು ಜಮ್ಮು-ಕಾಶ್ಮೀರದಲ್ಲಿ ನಡೆದ ಸಮಾರಂಭವನ್ನು ಉದ್ದೇಶಿಸಿ ರಾಜನಾಥ್ ಹೇಳಿದರು.

ನಾಲ್ಕು ವರ್ಷಗಳ ಹಿಂದೆ ಜೂನ್ 19, 2018 ರಂದು ಭದ್ರತಾ ಪರಿಸ್ಥಿತಿಯ ಕಾರಣ ಪಿಡಿಪಿ ಮತ್ತು ಬಿಜೆಪಿ ಮೈತ್ರಿಯಿಂದ ಹೊರಬಂದ ನಂತರ ಅಲ್ಲಿ ಯಾವುದೇ ಸರ್ಕಾರ ರಚನೆ ಆಗಿಲ್ಲ. ಚುನಾವಣಾ ಆಯೋಗವು ಕೇಂದ್ರಾಡಳಿತ ಪ್ರದೇಶದಲ್ಲಿ ಮತದಾರರ ಪಟ್ಟಿಗಳ ಪರಿಷ್ಕರಣೆಯನ್ನು ಪ್ರಾರಂಭಿಸಿದೆ ಮತ್ತು ಆಗಸ್ಟ್ 31 ರೊಳಗೆ ಕರಡು ಪಟ್ಟಿಯನ್ನು ಸಿದ್ಧಪಡಿಸಲಿದೆ.

### 'ಇನ್ನೋವೇಶನ್ ಬ್ಯಾಂಕ್' ಸ್ಥಾಪನೆಗೆ ಪ್ರಸ್ತಾಪಿಸಿದ ಗಡ್ಕರಿ



2025ರ ವೇಳೆಗೆ ರಾಷ್ಟ್ರೀಯ ಹೆದ್ದಾರಿ ಜಾಲವನ್ನು 2 ಲಕ್ಷ ಕಿಲೋಮೀಟರ್‌ಗೆ ವಿಸ್ತರಿಸುವ ನಿಟ್ಟಿನಲ್ಲಿ ಸರ್ಕಾರ ಕೆಲಸ ಮಾಡುತ್ತಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಶುಕ್ರವಾರ ಹೇಳಿದ್ದಾರೆ.

ಇಂಡಿಯನ್ ರೋಡ್ಸ್ ಕಾಂಗ್ರೆಸ್ (IRC) ಆಯೋಜಿಸಿದ್ದ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಗಡ್ಕರಿ ಅವರು, ಮೂಲಸೌಕರ್ಯ ಅಭಿವೃದ್ಧಿಯಲ್ಲಿ ಗುಣಮಟ್ಟವನ್ನು ಕೇಂದ್ರೀಕರಿಸಲು ಹೊಸ ಆಲೋಚನೆಗಳು, ಸಂಶೋಧನಾ ಸಂಶೋಧನೆಗಳು ಮತ್ತು ತಂತ್ರಜ್ಞಾನಗಳಿಗಾಗಿ 'ಇನ್ನೋವೇಶನ್ ಬ್ಯಾಂಕ್' ಅನ್ನು ಸ್ಥಾಪಿಸಲು ಪ್ರಸ್ತಾಪಿಸಿದರು.

2025ರ ವೇಳೆಗೆ ರಾಷ್ಟ್ರೀಯ ಹೆದ್ದಾರಿ ಜಾಲವನ್ನು 2 ಲಕ್ಷ ಕಿಲೋಮೀಟರ್‌ಗೆ ವಿಸ್ತರಿಸಲು ನಮ್ಮ ಸರ್ಕಾರ ಸಮರ್ಪಿತವಾಗಿ ಕೆಲಸ ಮಾಡುತ್ತಿದೆ ಎಂದು ಅವರು ಹೇಳಿದರು.

ಕಳೆದ ಎಂಟು ವರ್ಷಗಳಲ್ಲಿ, ರಾಷ್ಟ್ರೀಯ ಹೆದ್ದಾರಿಗಳ ಉದ್ದವು 2014ರಲ್ಲಿ 91,000 ಕಿ.ಮೀ. ನಿಂದ ಈಗ ಸುಮಾರು 1.47 ಲಕ್ಷ ಕಿ.ಮೀ.ಗೆ – ಶೇಕಡಾ 50ಕ್ಕಿಂತ ಹೆಚ್ಚು ಹೆಚ್ಚಾಗಿದೆ ಎಂದರು. ಈಶಾನ್ಯ ಪ್ರದೇಶದ ಅಭಿವೃದ್ಧಿಗೆ ಸರ್ಕಾರವು ಅತ್ಯಂತ ಬದ್ಧವಾಗಿದೆ ಎಂದ ಅವರು, ಈ ಪ್ರದೇಶದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವಲ್ಲಿ NHIDCL (ರಾಷ್ಟ್ರೀಯ ಹೆದ್ದಾರಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ) ಪ್ರಮುಖ ಪಾತ್ರ ವಹಿಸುತ್ತಿದೆ ಎಂದು ಹೇಳಿದರು. ಇಲ್ಲಿಯವರೆಗೆ, ಈಶಾನ್ಯ ಪ್ರದೇಶದಲ್ಲಿ 45,000 ಕೋಟಿ ರೂಪಾಯಿ ವೆಚ್ಚದಲ್ಲಿ 2,344 ಕಿ.ಮೀ. ಹೆದ್ದಾರಿಯನ್ನು ನಿರ್ಮಿಸಲಾಗಿದೆ ಎಂದು ಗಡ್ಕರಿ ಹೇಳಿದರು.

### ಕಾಶಿ ವಿಶ್ವನಾಥನಿಗೆ ಮತ್ತೆ ಹೂ ನೀಡಲಿದೆ 'ಬಾಬಾ ಕಿ ಬಗಿಯಾ' ಉದ್ಯಾನವನ

ಕಾಶಿ ವಿಶ್ವನಾಥ ದೇಗುಲಕ್ಕೆ ಹೂಗಳನ್ನು ನೀಡುತ್ತಿದ್ದ 'ಬಾಬಾ ಕಿ ಬಗಿಯಾ' ಎಂಬ ಉದ್ಯಾನವನವನ್ನು ಉತ್ತರಪ್ರದೇಶ ಸರ್ಕಾರ ಅತಿಕ್ರಮಣದಿಂದ ಮುಕ್ತಗೊಳಿಸಿದೆ. ಈ ಮೂಲಕ ಈ ಉದ್ಯಾನವನ ಮತ್ತೆ ಕಾಶಿ ವಿಶ್ವನಾಥನಿಗೆ ಹೂಗಳನ್ನು ನೀಡಲಿದೆ. 62 ಸಾವಿರ ಚದರ ಅಡಿಯ 300 ಕೋಟಿ ರೂಪಾಯಿ ಬೆಲೆ ಬಾಳುವ ಈ ಉದ್ಯಾನವನ 2003ರಿಂದ ಇಬ್ಬರು ಮಾಫಿಯಾ ಸಹೋದರರ ಅಕ್ರಮ ವಶದಲ್ಲಿತ್ತು. ಗೋಡೆ ನಿರ್ಮಾಣ ಮಾಡುವ ಮೂಲಕ ಮಾಫಿಯಾದವರು ಈ ಉದ್ಯಾನವನವನ್ನು ಅತಿಕ್ರಮಣ ಮಾಡಿದ್ದರು.

ತಮಿಳುನಾಡು ಮೂಲದ ಸಂಘಟನೆಯ ಮಾಲೀಕತ್ವ ಹೊಂದಿರುವ ಈ ಉದ್ಯಾನವನದ ಭೂಮಿಯನ್ನು ಮಾಫಿಯಾ ವಶಪಡಿಸಿಕೊಂಡಿತ್ತು ಮತ್ತು ಇತರರಿಗೆ ಬಾಡಿಗೆಗೆ ನೀಡುತ್ತಿತ್ತು. ವಾಣಿಜ್ಯ ಉದ್ದೇಶಕ್ಕಾಗಿ ಈ ಭೂಮಿಯನ್ನು ಬಳಕೆ ಮಾಡುತ್ತಿದ್ದವರ ಕೈಯಿಂದ ವಾರಣಾಸಿ ಪೊಲೀಸ್ ಕಮಿಷನರೇಟ್ ಇದನ್ನು ವಾಪಸ್ ಪಡೆದುಕೊಂಡಿದೆ.

ತಮಿಳುನಾಡು ಮೂಲದ ಶ್ರೀಕಾಶಿ ನಟ್ಟುಕ್ಕೊಟ್ಟಯ್ ನಗರ ಸತ್ರಂ ಈ ಉದ್ಯಾನವನದ ಮಾಲೀಕತ್ವವನ್ನು ಹೊಂದಿದ್ದು, ಕಾಶಿ ವಿಶ್ವನಾಥನಿಗೆ 'ಭೋಗ್ ಪ್ರಸಾದ' ಸಿದ್ಧಪಡಿಸಲು 209 ವರ್ಷಗಳಿಂದ ಈ ಉದ್ಯಾನವನವನ್ನು ಬಳಸುತ್ತಿತ್ತು. ದೇವರಿಗೆ ನಿತ್ಯಪೂಜೆಗೆ ಇಲ್ಲಿ ಹೂಗಳನ್ನು ಬೆಳೆಯಲಾಗುತ್ತಿತ್ತು. ಇದೀಗ ಈ ಭೂಮಿಯನ್ನು ಅತಿಕ್ರಮಣದಿಂದ ಸ್ವತಂತ್ರಗೊಳಿಸಲಾಗಿದ್ದು, ಮತ್ತೆ ಇಲ್ಲಿ ಕಾಶಿ ವಿಶ್ವನಾಥನಿಗಾಗಿ ಹೂಗಳು ಅರಳಿ ನಿಲ್ಲಲಿವೆ.

### ರೆಹಮಾನ್ ಮಕ್ಕಿ ಜಾಗತಿಕ ಉಗ್ರ: ಯುಎಸ್, ಭಾರತ ಪ್ರಸ್ತಾಪಕ್ಕೆ ಚೀನಾ ಅಡ್ಡಗಾಲು



ಪಾಕಿಸ್ತಾನ ಮೂಲದ ಉಗ್ರಗಾಮಿ ಅಬ್ದುಲ್ ರೆಹಮಾನ್ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ಪಟ್ಟಿ ಮಾಡುವ ಭಾರತ ಮತ್ತು ಅಮೆರಿಕದ ಜಂಟಿ ಪ್ರಸ್ತಾವನೆಯನ್ನು ಚೀನಾ ಕೊನೆಯ ಕ್ಷಣದಲ್ಲಿ ವಿಶ್ವಸಂಸ್ಥೆಯಲ್ಲಿ ತಡೆಹಿಡಿದಿದೆ.

ಮಕ್ಕಿ ಯುಎಸ್-ನಿಯೋಜಿತ ಭಯೋತ್ಪಾದಕ ಮತ್ತು ಲಷ್ಕರ್-ಎ-ತೈಬಾ (ಎಲ್‌ಇಟಿ) ಮುಖ್ಯಸ್ಥ ಮತ್ತು 26/11 ಮಾಸ್ಟರ್ ಮೈಂಡ್ ಹಫೀಜ್ ಸಯೀದ್‌ನ ಸೋದರ ಸಂಬಂಧಿ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ 1267 ಐಎಸ್‌ಐಎಲ್ ಮತ್ತು ಅಲ್ ಖೈದಾ ನಿರ್ಬಂಧಗಳ ಸಮಿತಿಯ ಅಡಿಯಲ್ಲಿ ಮಕ್ಕಿಯನ್ನು ಜಾಗತಿಕ ಭಯೋತ್ಪಾದಕ ಎಂದು ಹೆಸರಿಸಲು ಭಾರತ ಮತ್ತು ಅಮೆರಿಕ ಜಂಟಿ ಪ್ರಸ್ತಾವನೆಯನ್ನು ಸಲ್ಲಿಸಿದ್ದವು ಎಂದು ತಿಳಿದುಬಂದಿದೆ. ಆದರೆ ಚೀನಾ ಪ್ರಸ್ತಾಪವನ್ನು ಕೊನೆಯ ಕ್ಷಣದಲ್ಲಿ ತಡೆಹಿಡಿದಿದೆ.

ಇದಕ್ಕೂ ಮೊದಲು, ಪಾಕಿಸ್ತಾನದ ಪರಮ ಮಿತ್ರ ಚೀನಾ ಈ ರೀತಿಯ ಕೃತ್ಯಗಳನ್ನು ಎಸಗಿದೆ. ಮೇ 2019ರಲ್ಲಿ, ವಿಶ್ವ ಸಂಸ್ಥೆಯು ಪಾಕಿಸ್ತಾನ ಮೂಲದ ಜೈಶ್-ಎ-ಮೊಹಮ್ಮದ್ ಮುಖ್ಯಸ್ಥ ಮಸೂದ್ ಅಜರ್‌ನನ್ನು ಕಪ್ಪು ಪಟ್ಟಿಗೆ ಸೇರಿಸುವ ಪ್ರಯತ್ನವನ್ನು ತಡೆಹಿಡಿದಿತ್ತು.

## 8 ವರ್ಷಗಳ ನಂತರ ಮುಕ್ತ ವ್ಯಾಪಾರ ಒಪ್ಪಂದದ ಮಾತುಕತೆ ಪುನರಾರಂಭಿಸಿದ ಭಾರತ-ಇಯು



ಭಾರತ ಮತ್ತು ಯುರೋಪಿಯನ್ ಯೂನಿಯನ್ (ಇಯು) ಅಂತಿಮವಾಗಿ ಎಂಟು ವರ್ಷಗಳ ಅಂತರದ ನಂತರ ಶುಕ್ರವಾರ ದೀರ್ಘಕಾಲ ಬಾಕಿ ಉಳಿದಿರುವ ವ್ಯಾಪಾರ ಮತ್ತು ಹೂಡಿಕೆ ಒಪ್ಪಂದದ ಮಾತುಕತೆಗಳನ್ನು ಪುನರಾರಂಭಿಸಿವೆ.

ಸಮತೋಲಿತ ಮತ್ತು ಸಮಗ್ರ ವ್ಯಾಪಾರ ಒಪ್ಪಂದಕ್ಕಾಗಿ ಮಾತುಕತೆಗಳನ್ನು ಪುನರಾರಂಭಿಸಲು ಭಾರತ ಮತ್ತು ಇಯು ಘೋಷಿಸಿದ ಒಂದು ವರ್ಷದ ನಂತರ ಬ್ರಸೆಲ್‌ನಲ್ಲಿ ಮಾತುಕತೆಗಳು ನಡೆದವು. "ಸಚಿವ ಪಿಯೂಷ್ ಗೋಯಲ್ ಮತ್ತು ನಾನು ಈಗಷ್ಟೇ ಫಲಪ್ರದ ಸಭೆಯನ್ನು ಮುಗಿಸಿದ್ದೇವೆ. ಇಂದು ನಾವು ಮುಕ್ತ ವ್ಯಾಪಾರ ಒಪ್ಪಂದದ ಕಡೆಗೆ ಇಯು-ಭಾರತ ಮಾತುಕತೆಗಳನ್ನು ಔಪಚಾರಿಕವಾಗಿ ಪುನರಾರಂಭಿಸುತ್ತೇವೆ ಮತ್ತು ಹೂಡಿಕೆ ಸಂರಕ್ಷಣಾ ಒಪ್ಪಂದ ಮತ್ತು ಭೌಗೋಳಿಕ ಸೂಚನೆಗಳ ಮೇಲಿನ ಒಪ್ಪಂದದ ಕುರಿತು ಮಾತುಕತೆಗಳನ್ನು ಪ್ರಾರಂಭಿಸುತ್ತೇವೆ" ಎಂದು ಇಯು ಟ್ರೇಡ್ ಕಮಿಷನರ್ ವಾಲ್ಡಿಸ್ ಡೊಂಬ್ರೊವ್ಸ್ಕಿಸ್ ಹೇಳಿದ್ದಾರೆ.

ಮುಂಬರುವ ದಶಕದಲ್ಲಿ 27 ರಾಷ್ಟ್ರಗಳ ಇಯು ಒಕ್ಕೂಟಕ್ಕೆ ಭಾರತದೊಂದಿಗೆ ಪಾಲುದಾರಿಕೆಯು ಅತ್ಯಂತ ಪ್ರಮುಖ ಸಂಬಂಧಗಳಲ್ಲಿ ಒಂದಾಗಿದೆ ಎಂದು ಅವರು ವಿವರಿಸಿದ್ದಾರೆ. ಮುಕ್ತ ವ್ಯಾಪಾರ ಒಪ್ಪಂದದ ಮುಂದಿನ ಸುತ್ತಿನ ಮಾತುಕತೆಗಳು ಜೂನ್ 27 ರಿಂದ ಜುಲೈ 1 ರವರೆಗೆ ನವದೆಹಲಿಯಲ್ಲಿ ನಡೆಯಲಿದೆ ಎಂದು ಡೊಂಬ್ರೊವ್ಸ್ಕಿಸ್ ಹೇಳಿದ್ದಾರೆ.

ನಾವು ಮಹತ್ವಾಕಾಂಕ್ಷೆಯ ಟೈಮ್‌ಲೈನ್ ಅನ್ನು ಅನುಸರಿಸುತ್ತಿದ್ದೇವೆ ಮತ್ತು 2023ರ ಅಂತ್ಯದ ವೇಳೆಗೆ ಮಾತುಕತೆಗಳನ್ನು ಮುಕ್ತಾಯಗೊಳಿಸುವ ಗುರಿಯನ್ನು ನಾವು ಹೊಂದಿದ್ದೇವೆ. ವ್ಯಾಪಾರ, ಹೂಡಿಕೆ ರಕ್ಷಣೆ ಮತ್ತು ಭೌಗೋಳಿಕ ಸೂಚನೆಗಳ ಮೇಲಿನ ಈ ದೂರಗಾಮಿ ಮಾತುಕತೆಗಳು EU-ಭಾರತ ಸಂಬಂಧಗಳಲ್ಲಿ ಹೊಸ ಮತ್ತು ಉತ್ತೇಜಕ ಅಧ್ಯಾಯವನ್ನು ತೆರೆಯುತ್ತದೆ ಎಂದಿದ್ದಾರೆ.

ಭಾರತ – ಇಯು ಈಗಾಗಲೇ 120 ಬಿಲಿಯನ್ ಯುರೋಗಳ ವಾರ್ಷಿಕ ವ್ಯಾಪಾರದೊಂದಿಗೆ ಪ್ರಮುಖ ವ್ಯಾಪಾರ ಪಾಲುದಾರರಾಗಿವೆ. ಇಯು ಭಾರತದ ಮೂರನೇ ಅತಿದೊಡ್ಡ ವ್ಯಾಪಾರ ಪಾಲುದಾರರಾಗಿದ್ದು, 2021ರಲ್ಲಿ ಭಾರತೀಯ ವ್ಯಾಪಾರದ ಸುಮಾರು 11 ಪ್ರತಿಶತವನ್ನು ಹೊಂದಿದೆ ಎಂದು ಅವರು ಹೇಳಿದ್ದಾರೆ.

## ಒಂದಕ್ಕಿಂತ ಹೆಚ್ಚು ಸ್ಥಾನದಲ್ಲಿ ಸ್ಪರ್ಧಿಸದಂತೆ ತಿದ್ದುಪಡಿ ತರಲು ಚುನಾವಣಾ ಆಯೋಗ ಮನವಿ.

ಸುಮಾರು ಎರಡು ದಶಕಗಳ ಹಿಂದಿನ ಪ್ರಸ್ತಾವನೆಯನ್ನು ಚುನಾವಣಾ ಆಯೋಗ ಮತ್ತೆ ಮುನ್ನಲೆಗೆ ತಂದಿದ್ದು, ಒಂದಕ್ಕಿಂತ ಹೆಚ್ಚು ಸ್ಥಾನಗಳಲ್ಲಿ ಚುನಾವಣೆಗೆ ಸ್ಪರ್ಧಿಸುವುದನ್ನು ತಡೆಯುವ ಕಾನೂನಿಗೆ ತಿದ್ದುಪಡಿ ತರುವಂತೆ ಕೇಂದ್ರಕ್ಕೆ ಒತ್ತಾಯ ಮಾಡಿದೆ.

ಒಂದು ವೇಳೆ ತಿದ್ದುಪಡಿ ಮಾಡಲಾಗದಿದ್ದರೆ, ಒಂದಕ್ಕಿಂತ ಹೆಚ್ಚು ಸ್ಥಾನದಲ್ಲಿ ಸ್ಪರ್ಧಿಸಿ ವಿಜಯದ ಬಳಿಕ ಒಂದು ಸ್ಥಾನವನ್ನು ತೊರೆದು ಅನಿವಾರ್ಯವಾಗಿ ಉಪ ಚುನಾವಣೆ ನಡೆಸುವಂತೆ ಮಾಡುವವರ ವಿರುದ್ಧ ಭಾರೀ ದಂಡವನ್ನು ವಿಧಿಸಬೇಕು ಎಂದು ಹೇಳಿದೆ. ಕಾನೂನು ಸಚಿವಾಲಯದಲ್ಲಿ ಶಾಸಕಾಂಗ ಕಾರ್ಯದರ್ಶಿಯೊಂದಿಗಿನ ಇತ್ತೀಚಿನ ಸಂವಾದದಲ್ಲಿ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, 2004ರಲ್ಲಿ ಮೊದಲ ಬಾರಿಗೆ ಪ್ರಸ್ತಾಪಿಸಲಾದ ಈ ಸುಧಾರಣೆಯನ್ನು ಮಾಡುವಂತೆ ಕೇಂದ್ರವನ್ನು ಒತ್ತಾಯ ಮಾಡಿದರು. ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿಭಾಯಿಸಲು ಶಾಸಕಾಂಗ ಇಲಾಖೆಯು ಸರ್ಕಾರದ ನೋಡಲ್ ಏಜೆನ್ಸಿಯಾಗಿದೆ.

ಇಂದಿನ ಚುನಾವಣಾ ಕಾನೂನಿನಂತೆ, ಅಭ್ಯರ್ಥಿಯು ಸಾರ್ವತ್ರಿಕ ಚುನಾವಣೆ ಅಥವಾ ಉಪ-ಚುನಾವಣೆ ಅಥವಾ ದ್ವೈವಾರ್ಷಿಕ ಚುನಾವಣೆಗಳಲ್ಲಿ ಎರಡು ವಿಭಿನ್ನ ಕ್ಷೇತ್ರಗಳಿಂದ ಚುನಾವಣೆಯಲ್ಲಿ ಸ್ಪರ್ಧಿಸಲು ಅನುಮತಿಸಲಾಗಿದೆ. ಒಬ್ಬ ವ್ಯಕ್ತಿಯು ಒಂದಕ್ಕಿಂತ ಹೆಚ್ಚು ಸ್ಥಾನಗಳಿಂದ ಚುನಾಯಿತರಾದರೆ, ಆ ವ್ಯಕ್ತಿಯು ತಾನು ಗೆದ್ದ ಸ್ಥಾನಗಳಲ್ಲಿ ಒಂದನ್ನು ಮಾತ್ರ ಇಟ್ಟುಕೊಂಡು ಮತ್ತೊಂದನ್ನು ಬಿಡಬೇಕು.

पुंगव PUNGAVA
# 74, Ranga Rao Road, Shankarapuram,
Bangalore - 560 004. Mob: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

Date of Publication 25th JUNE 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 1-07-2022



## ಕಳೆದ 8 ವರ್ಷಗಳಲ್ಲಿ ಇಡೀ ವಿದ್ಯುತ್ ಕ್ಷೇತ್ರವು ಬದಲಾಗಿದೆ: ಆರ್.ಕೆ. ಸಿಂಗ್



ಈ ವರ್ಷ ಭಾರತದ ವಿದ್ಯುತ್ ಬೇಡಿಕೆಯು ದಿನಕ್ಕೆ 40,000–45,000 ಮೆಗಾವ್ಯಾಟ್‌ನ ದಾಖಲೆಯ ಜಿಗಿತವನ್ನು ಕಂಡಿದೆ. ದೇಶದ ಉತ್ತರ ಭಾಗಗಳಲ್ಲಿ ತೀವ್ರವಾದ ಬಿಸಿಲ ಬೇಗೆ, ಆರ್ಥಿಕತೆಯ ವಿಸ್ತರಣೆ ಮತ್ತು ಲಕ್ಷಾಂತರ ವಿದ್ಯುತ್ ಇಲ್ಲದ ಮನೆಗಳಿಗೆ ವಿದ್ಯುತ್ ತಲುಪಿಸಿರುವುದು ವಿದ್ಯುತ್ ಬೇಡಿಕೆ ಹೆಚ್ಚಾಗಲು ಕಾರಣ ಎಂದು ಕೇಂದ್ರ ಇಂಧನ ಸಚಿವ ಆರ್.ಕೆ. ಸಿಂಗ್ ಹೇಳಿದ್ದಾರೆ.

ಮೋದಿ ಸರ್ಕಾರದ 8 ವರ್ಷಗಳ ಅವಧಿಯಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯದಲ್ಲಿ ಭಾರಿ ಸೇರ್ಪಡೆಯಾಗಿದೆ. ದೇಶವನ್ನು ಒಂದು ಪ್ರಸರಣ ಗ್ರಿಡ್‌ಗೆ ಸಂಯೋಜಿಸಲಾಗಿದೆ ಮತ್ತು ವಿದ್ಯುತ್ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ 23 ರಿಂದ 23.5 ಗಂಟೆಗಳ ಕಾಲ ವಿದ್ಯುತ್ ಪೂರೈಕೆಯನ್ನು ಖಾತ್ರಿಪಡಿಸಲಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಜೂನ್ 9 ರಂದು ಭಾರತದ ವಿದ್ಯುತ್ ಬೇಡಿಕೆಯು ಸಾರ್ವಕಾಲಿಕ ಗರಿಷ್ಠ 2,10,792 ಮೆಗಾವ್ಯಾಟ್ ದಾಖಲಾಗಿದೆ ಮತ್ತು 4,712 ಮಿಲಿಯನ್ ಯೂನಿಟ್ ವಿದ್ಯುತ್ ಅನ್ನು ಬಳಸಲಾಗಿದೆ ಎಂದಿದ್ದಾರೆ.

ಈ ಬೇಡಿಕೆಯನ್ನು ಪೂರೈಸಲು ವಿದ್ಯುತ್ ಸ್ಥಾವರಗಳು ಪೂರ್ಣ ಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದೇಶೀಯ ಪೂರೈಕೆಯಲ್ಲಿನ ಕೊರತೆಯನ್ನು ಪೂರೈಸಲು ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಸರ್ಕಾರ ಆದೇಶಿಸಿದೆ ಎಂದಿದ್ದಾರೆ. NGO ನಡೆಸಿದ ಸಮೀಕ್ಷೆಯ ಪ್ರಕಾರ, ರಾಷ್ಟ್ರೀಯ ಮಟ್ಟದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಿಂದೆ ಸರಾಸರಿ 12.5 ಗಂಟೆಗಳ ವಿದ್ಯುತ್ ಲಭ್ಯತೆ ಇತ್ತು. ಇಂದು ಅದು 22.5 ಗಂಟೆಗೆ ಏರಿಕೆಯಾಗಿದೆ ಎಂದು ಅವರು ಹೇಳಿದ್ದಾರೆ. 17 ರಿಂದ 20 ರಷ್ಟು ಸರಾಸರಿ ಕೊರತೆಯನ್ನು ಹೊಂದಿದ್ದ ವಿದ್ಯುತ್ ಕೊರತೆಯ ರಾಷ್ಟ್ರವಾದ ಭಾರತವನ್ನು ವಿದ್ಯುತ್ ಹೆಚ್ಚುವರಿ ದೇಶವಾಗಿ ಪರಿವರ್ತಿಸಲಾಗಿದೆ ಎಂದಿದ್ದಾರೆ.

## ಅರುಣಾಚಲ, ಗುಜರಾತ್ ನಡುವೆ ರುಕ್ಮಣಿ–ಕೃಷ್ಣ ಯಾತ್ರೆಗೆ ಸಿಗುತ್ತಿದೆ ಉತ್ತೇಜನ



ಸ್ಮಾರಕಗಳ ಸಂರಕ್ಷಣೆಯ ಗುರಿಯೊಂದಿಗೆ, ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರವು ಅರುಣಾಚಲ ಪ್ರದೇಶ ಮತ್ತು ಗುಜರಾತ್ ನಡುವೆ ರುಕ್ಮಿಣಿ–ಕೃಷ್ಣ ಯಾತ್ರೆಯನ್ನು ದೊಡ್ಡ ಪ್ರಮಾಣದಲ್ಲಿ ಬಲಪಡಿಸಲು ಮತ್ತು ಅದನ್ನು ರಾಷ್ಟ್ರಮಟ್ಟದಲ್ಲಿ ಉತ್ತೇಜಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ.

ರುಕ್ಮಿಣಿ ಮತ್ತು ಶ್ರೀಕೃಷ್ಣನ ಚರಿತ್ರೆಯ ಮೂಲಕ ಗುಜರಾತ್‌ನೊಂದಿಗೆ ಅರುಣಾಚಲದ ಪ್ರಾಚೀನ ಸಾಂಸ್ಕೃತಿಕ ಸಂಪರ್ಕವನ್ನು ಬಲಪಡಿಸುವ ಬಗ್ಗೆ ನಿರ್ಧರಿಸಲು ಅರುಣಾಚಲದ ಉಪ ಮುಖ್ಯಮಂತ್ರಿ ಮತ್ತು ರಾಷ್ಟ್ರೀಯ ಸ್ಮಾರಕ ಪ್ರಾಧಿಕಾರದ (NMA) ಉನ್ನತ ಅಧಿಕಾರಿಗಳ ಸಭೆ ನಡೆದಿದೆ. NMA ಅಧ್ಯಕ್ಷ ತರುಣ್ ವಿಜಯ್ ಮಾತನಾಡಿ, ಗುಜರಾತ್‌ನ ಜನರು ಭೀಷ್ಮಕ್ ನಗರಕ್ಕೆ ಭೇಟಿ ನೀಡುವುದನ್ನು ಉತ್ತೇಜಿಸಲಾಗುತ್ತಿದೆ ಮತ್ತು ಪ್ರತಿಯಾಗಿ ರಾಷ್ಟ್ರದ ಪೂರ್ವ ಮತ್ತು ದೂರದ ಪಶ್ಚಿಮ ಮೂಲೆಗಳ ನಡುವೆ ಸಾಂಸ್ಕೃತಿಕ ಪ್ರವಾಸೋದ್ಯಮವನ್ನು ಹೆಚ್ಚಿಸಲು ಯೋಜಿಸಲಾಗಿದೆ. ಇದು ಪ್ರಧಾನಮಂತ್ರಿಯವರು ರೂಪಿಸಿದ ರಾಷ್ಟ್ರೀಯ ಏಕತೆ ಮತ್ತು ಏಕ ಭಾರತ ಶ್ರೇಷ್ಠ ಭಾರತ ಕಲ್ಪನೆಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ ಎಂದಿದ್ದಾರೆ.

ರಾಷ್ಟ್ರೀಯ ಪ್ರಾಧಿಕಾರದ ತಂಡವು ಪೌರಾಣಿಕ ಸ್ಥಳವಾದ ಭೀಷ್ಮಕ್ ನಗರದ ರುಕ್ಮಿಣಿ ಅರಮನೆಯ ಅವಶೇಷಗಳಿಗೆ ಭೇಟಿ ನೀಡಿತು ಮತ್ತು ಶ್ರೀ ಕೃಷ್ಣನಿಗೆ ರುಕ್ಮಿಣಿಯ ವಿವಾಹದ ಸುಂದರವಾದ ಕಥೆಯನ್ನು ವಿವರಿಸುವ ಹಲವಾರು ಹಳ್ಳಿಯ ಹಿರಿಯರನ್ನು ಭೇಟಿ ಮಾಡಿದರು. ಈ ಕಥೆಯನ್ನು ಇಂದಿಗೂ ಮಿಶ್ಮಿ ಬುಡಕಟ್ಟು ಹಾಡುಗಳಲ್ಲಿ ಹಾಡಲಾಗುತ್ತದೆ. NMA ಹಲವಾರು ಸ್ಥಳೀಯ ಪುರಾತತ್ವ ಸ್ಥಳಗಳಿಗೆ ಭೇಟಿ ನೀಡಿದೆ ಮತ್ತು ಈ ಸೂಕ್ಷ್ಮ ಗಡಿ ರಾಜ್ಯದ ಸ್ಪಷ್ಟವಾದ ಮತ್ತು ಅಮೂರ್ತ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸಲು ವಿವರವಾದ ವರದಿಯನ್ನು ಸಿದ್ಧಪಡಿಸುತ್ತಿದೆ.

## ಭಾರತಕ್ಕೆ ಹೊರಗಿನವರ ಪಾಠದ ಅಗತ್ಯವಿಲ್ಲ: ವಿಶ್ವಸಂಸ್ಥೆಯಲ್ಲಿ ಭಾರತ

ಭಾರತವು ಸಹಿಷ್ಣುತೆ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುತ್ತದೆ ಮತ್ತು ಕಾನೂನು ಚೌಕಟ್ಟಿನೊಳಗೆ ಯಾವುದೇ ವಿಧ್ವಂಸಕತೆಯನ್ನು ಪರಿಣಾಕಾರಿಯಾಗಿ ಎದುರಿಸುತ್ತದೆ ಎಂದು ಭಾರತ ವಿಶ್ವಸಂಸ್ಥೆಯಲ್ಲಿ ಹೇಳಿದೆ. ನೂಪುರ್ ಶರ್ಮಾ ಅವರು ಇಸ್ಲಾಂ ಪ್ರವಾದಿಯ ಬಗ್ಗೆ ನೀಡಿದ ಹೇಳಿಕೆಗೆ ಮುಸ್ಲಿಂ ದೇಶಗಳಲ್ಲಿ ಹೊರಹೊಮ್ಮುತ್ತಿರುವ ಆಕ್ರೋಶಕ್ಕೆ ಸಂಬಂಧಿಸಿದಂತೆ ಭಾರತ ಈ ಹೇಳಿಕೆ ನೀಡಿದೆ.

ವಿಶ್ವಸಂಸ್ಥೆಯ ಭಾರತದ ಖಾಯಂ ಪ್ರತಿನಿಧಿ ಟಿಎಸ್ ತಿರುಮೂರ್ತಿ ಅವರು, ದೇಶಕ್ಕೆ ಹೊರಗಿನವರಿಂದ ಆಯ್ದ ಆಕ್ರೋಶ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಭಾರತದ ಬಹುಸಂಸ್ಕೃತಿಯ ನೆಲ ಶತಮಾನಗಳಿಂದ ಎಲ್ಲರಿಗೂ ಸುರಕ್ಷಿತ ಸ್ವರ್ಗವಾಗಿದೆ. ಯಹೂದಿ ಸಮುದಾಯ ಅಥವಾ ಜೊರಾಸ್ಟ್ರಿಯನ್ನರು ಅಥವಾ ಟಿಬೆಟಿಯನ್ನರು ಅಥವಾ ನಮ್ಮ ಸ್ವಂತ ನೆರೆಹೊರೆಯವರು ಕೂಡ ಭಾರತದಲ್ಲಿ ಆಶ್ರಯ ಪಡೆದುಕೊಂಡಿದ್ದಾರೆ.

“ನಮ್ಮ ರಾಷ್ಟ್ರದ ಈ ಆಧಾರವಾಗಿರುವ ಶಕ್ತಿಯೇ ಮೂಲಭೂತೀಕರಣ ಮತ್ತು ಭಯೋತ್ಪಾದನೆಯನ್ನು ತಡೆದುಕೊಂಡಿದೆ” ಎಂದು ಅವರು ಹೇಳಿದರು. “ನಾವು ಮತ್ತೆ ಮತ್ತೆ ಒತ್ತಿಹೇಳುತ್ತೇವೆ, ಧಾರ್ಮಿಕ ಫೋಬಿಯಾವನ್ನು ಎದುರಿಸುವುದು ಕೇವಲ ಒಂದು ಅಥವಾ ಎರಡು ಧರ್ಮಗಳನ್ನು ಒಳಗೊಂಡ ಆಯ್ದ ಕಾರ್ಯ ಆಗಬಾರದು. ಅದನ್ನು ಅಬ್ರಹಾಮಿಕ್ ಅಲ್ಲದ ಧರ್ಮಗಳ ವಿರುದ್ಧದ ಫೋಬಿಯಾಗಳಿಗೂ ಸಮಾನವಾಗಿ ಅನ್ವಯಿಸಬೇಕು. ಹೀಗಾಗದ ಹೊರತು ಅಂತರರಾಷ್ಟ್ರೀಯ ದಿನಗಳು ಎಂದಿಗೂ ತಮ್ಮ ಉದ್ದೇಶಗಳನ್ನು ಸಾಧಿಸುವುದಿಲ್ಲ. ಧರ್ಮಾಂಧತೆಯ ಮೇಲೆ ಎರಡು ಮಾನದಂಡಗಳು ಇರಬಾರದು” ಎಂದಿದ್ದಾರೆ.

*1ನೇ ಪುಟದಿಂದ...*

## ದೇಶದ ಸುರಕ್ಷತೆಗಾಗಿ ಅಗ್ನಿಪಥ!

ಮನೋಭಾವವನ್ನು ಬೆಳಸಿಕೊಳ್ಳುವುದನ್ನು ಕಲಿಸಿಕೊಡುತ್ತದೆ. ಈಗಿನ ಕೆಲವು ವಿಶ್ವವಿದ್ಯಾಲಯಗಳಲ್ಲಿ ಕಾಣಸಿಗುವ ಟುಕ್ಡೇ ಗ್ಯಾಂಗುಗಳಲ್ಲಾಗಲೀ ಅಥವಾ ರಸ್ತೆಗಳನ್ನು ಅಡ್ಡಗಟ್ಟಿ ಟೈರುಗಳು ಬಸ್ಸುಗಳನ್ನು ಸುಡುವ ದುಷ್ಕೃತ್ಯ ಮನೋಭಾವದ ಗುಂಪಿನಿಂದ ಇವರು ದೂರ ಉಳಿಯುತ್ತಾರೆ. ಸೈನ್ಯದ ವಾತಾವರಣದಲ್ಲಿ ಬೆಳಸಿಕೊಂಡ ವಿಕಸಿತ ಮನೋಭಾವ ಮತ್ತು ರಾಷ್ಟ್ರಪ್ರೇಮ ಇವರನ್ನು ಉತ್ತಮ ಪ್ರಜೆಗಳ ಗುಂಪಿಗೆ ಸೇರಿಸುತ್ತದೆ. ಇದೊಂದು ಪೂರ್ಣಾವಧಿಯ ವೃತ್ತಿಯಲ್ಲದಿದ್ದರೂ ಭವಿಷ್ಯದಲ್ಲಿ ಒಂದು ಸಮರ್ಥ, ಸಮೃದ್ಧ ಜೀವನವನ್ನು ರೂಪಿಸಿಕೊಳ್ಳುವುದರಲ್ಲಿ ಖಂಡಿತಾ ನೆರವಾಗುವ ಒಂದು spring board ಆಗಲಿದೆ.

ಈ ಯೋಜನೆ ಸೈನ್ಯದ ಸರಾಸರಿ ವಯಸ್ಸು ಈಗಿರುವ 32 ರಿಂದ ಮುಂಬರುವ ವರ್ಷಗಳಲ್ಲಿ ಗಮನೀಯವಾಗಿ ಕಡಿಮೆಯಾಗಲಿದ್ದು ಒಂದು ಉತ್ಸಾಹಭರಿತ ಯುವ ಸೈನ್ಯವನ್ನು ರಚಿಸುವಲ್ಲಿ ಯಶಸ್ವಿಯಾಗಲಿದೆ. ಭವಿಷ್ಯತ್ತಿನ ಯುದ್ಧತಂತ್ರಕ್ಕೆ ಅತ್ಯಾವಶ್ಯಕವಾದ ತಾಂತ್ರಿಕ ಜ್ಞಾನವನ್ನು ಈ ಯುವ ಸೈನ್ಯ ಬಹುಬೇಗ ಅಳವಡಿಸಿಕೊಳ್ಳುವ ನಿರೀಕ್ಷೆ ಇದೆ.

ರಕ್ಷಣಾವಲಯದಲ್ಲೂ ಆತ್ಮನಿರ್ಭರತೆಯನ್ನು ಅಳವಡಿಸಿಕೊಳ್ಳುವ ನಿಟ್ಟಿನಲ್ಲಿ ಕೆಲವು ಕಹಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅನಿವಾರ್ಯ. ಇದನ್ನು ವಿವರಿಸಲು ಕೆಲವು ಅಂಕಿಅಂಶಗಳ ಸಹಾಯ ಬೇಕಾಗುತ್ತದೆ.

ಈ ವರ್ಷದ ರಕ್ಷಣಾ ಬಜೆಟ್ ಅಂದಾಜು 5.25 ಲಕ್ಷ ಕೋಟಿ ರೂಪಾಯಿಗಳು. ಇದರಲ್ಲಿ ಸುಮಾರು 4.05 ಲಕ್ಷ ಕೋಟಿ ರೂಪಾಯಿಗಳು ಸೈನ್ಯದ ಎಲ್ಲಾ ಅಂಗಗಳ ನಿರ್ವಹಣೆಗೆ ವೆಚ್ಚವಾಗುತ್ತದೆ. ಯುದ್ಧ ಸಾಮಗ್ರಿಗಳನ್ನು ಖರೀದಿಸಲು 1.38 ಲಕ್ಷ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ. ನಿವೃತ್ತ ಸೈನಿಕರ ಪಿಂಚಣಿಯ ವೆಚ್ಚಕ್ಕೆಂದು ಸುಮಾರು 1.20 ಲಕ್ಷ ಕೋಟಿ ರೂಪಾಯಿಗಳು ಅಂದರೆ ರಕ್ಷಣಾ ಬಜೆಟ್ಟಿನ ಸುಮಾರು 23% ಪಿಂಚಣಿಗೇ ಹೋಗಿಬಿಡುತ್ತದೆ. 2012–2013 ಬಜೆಟ್ಟಿನಲ್ಲಿ ಪಿಂಚಣಿ ಸುಮಾರು 19% ಇದ್ದದ್ದು ಈಗ 23% ಆಗಿದೆ. ನಾವು ಆಮದು ಮಾಡಿಕೊಳ್ಳುತ್ತಿರುವ ಬೃಹತ್ ಮೊತ್ತದ ಯುದ್ಧಸಾಮಗ್ರಿಗಳನ್ನು ಕ್ರಮೇಣ ಕಡಿಮೆ ಮಾಡಿ ಮತ್ತು ಸೈನ್ಯಕ್ಕೆ ಬೇಕಾಗಿರುವ ಸಾಮಗ್ರಿಗಳನ್ನು ನಮ್ಮ ದೇಶದಲ್ಲೇ ತಯಾರಿಸಲು ಸಂಶೋಧನಾ ಮತ್ತು ಅಭಿವೃದ್ಧಿ (R&D) ಅತ್ಯಾವಶ್ಯಕ ಮತ್ತು ಇದಕ್ಕೆ ಮುಕ್ತವಾಗಿ ದೇಣಿಗೆ ನೀಡಬೇಕಾಗುತ್ತದೆ. ಸದ್ಯಕ್ಕೆ ಯುದ್ಧ ಸಾಮಗ್ರಿಗಳನ್ನು ಖರೀದಿಸಲು ಕೊಟ್ಟಿರುವ 1.38 ಲಕ್ಷ ಕೋಟಿಯಲ್ಲಿ 25% ಮಾತ್ರ ಸಂಶೋಧನಾ ಮತ್ತು ಅಭಿವೃದ್ಧಿಗೆ ಮೀಸಲಿಡಲಾಗಿದೆ, ಈ ಮೊತ್ತವನ್ನು ಇನ್ನೂ ಹೆಚ್ಚಿಸಬೇಕಾಗಿದೆ. ಇದು ವರ್ಷಗಳ ಹಿಂದೆಯೇ ನಡೆಯಬೇಕಾಗಿತ್ತು ಆದರೆ ವಿದೇಶಗಳಿಂದ ಆಮದು ಮಾಡಿಕೊಳ್ಳುವ ಸಾಮಗ್ರಿಗಳಲ್ಲಿ ಸಿಗುತ್ತಿದ್ದ ಕಮಿಷನ್ನಿನ ದುರಾಸೆಗೆ ಜೋತು ಬಿದ್ದು ದೇಶದ ಸ್ವಾವಲಂಬನೆಯನ್ನೆ ಬಲಿಕೊಟ್ಟರು ಭ್ರಷ್ಟರು. ಮುಂಬರುವ ವರ್ಷಗಳಲ್ಲಾದರೂ ಇದನ್ನು ಸರಿಪಡಿಸುವ ನಿಟ್ಟಿನಲ್ಲಿ ಈಗಿನ ಸರ್ಕಾರ ಪ್ರಯತ್ನಿಸುತ್ತಿದೆ. ಪ್ರತಿ ವರ್ಷ ಹೆಚ್ಚಾಗುತ್ತಿರುವ ಪಿಂಚಣಿ ಬಜೆಟ್ಟನ್ನು ಕಡಿಮೆಗೊಳಿಸಿ ಈ ಮೊತ್ತವನ್ನು ರಕ್ಷಣಾವಲಯದಲ್ಲಿ ಆತ್ಮನಿರ್ಭರತೆಯನ್ನು ವೃದ್ಧಿಸಿಕೊಳ್ಳುವ ನಿಟ್ಟಿನಲ್ಲಿ ಅಗ್ನಿಪಥ್ ಯೋಜನೆ ಸಹಾಯವಾಗಲಿದೆ.

ಸದ್ಯಕ್ಕೆ ನಮ್ಮ ದೇಶದ ನಿರುದ್ಯೋಗ ಸಮಸ್ಯೆ ಸುಮಾರು 8% ನಷ್ಟಿದೆ. ಆದರೆ ಹರಿಯಾಣ, ಬಿಹಾರ, ಯುಪಿ ಮತ್ತು ರಾಜಾಸ್ಥಾನದಲ್ಲಿ ಇದು 34.5% ನಿಂದ 21% ವರೆಗೂ ಇದೆ. ಈ ಪ್ರದೇಶಗಳು ಅಸಲಿಗೆ ಅಗ್ನಿಪಥ್ ಅಂತಹ ಯೋಜನೆಯನ್ನು ಸ್ವಾಗತಿಸಬೇಕಿತ್ತು.ಆದರೆ, ಇಲ್ಲಿಯವರು ಇದನ್ನು ವಿರೋಧಿಸಿ ದಂಗೆ ಎದ್ದು ರೈಲು ಬೋಗಿಗಳಿಗೆ ಬೆಂಕಿ ಹಚ್ಚುತ್ತಿದ್ದಾರೆ. ಮೊಟ್ಟ ಮೊದಲನೆಯದಾಗಿ ಇಂತಹ ದುಷ್ಕರ್ಮಿಗಳು ಸೈನ್ಯಕ್ಕೆ ಸೇರಲು ಅನರ್ಹರು ಆಮೇಲೆ ಇವರಿಗೆ ಪಿಂಚಣಿ ಸಿಗುವ ಖಾಯಂ ಕೆಲಸಗಳು ಬೇಕು. ಇನ್ನೊಂದು ಗಮನಾರ್ಹ ವಿಷಯವೆಂದರೆ ಈ ರಾಜ್ಯಗಳಲ್ಲಿ ಸಾಕ್ಷರತೆ ದೇಶದ ಸರಾಸರಿಗಿಂತ ಕಡಿಮೆ ಹಾಗಾಗಿ ಅಗ್ನಿಪಥ್‌ನಲ್ಲಿ ನಡೆಯುವ ಪರೀಕ್ಷೆಗಳು ದೇಶಮಟ್ಟದ ಏಕಮುಖ ಪರೀಕ್ಷೆಗಳಲ್ಲಿ ಸೋತುಹೋಗುವ ಭಯವೂ ಇರಬಹುದೇನೋ.

ದಿವಂಗತ ಜನರಲ್ ಬಿಪಿನ್ ರಾವತ್ ಹೇಳುತ್ತಿದ್ದರು. “ಸೈನ್ಯವೆಂದರೆ ಉದ್ಯೋಗ ವಿನಿಮಯ ಕೇಂದ್ರವಲ್ಲ, MNREGA ಸ್ಕೀಮುಗಳಲ್ಲ, ಅದು ದೇಶದ ಸುರಕ್ಷತೆಗೆ ಬೇಕಾದ ದೂರದೃಷ್ಟಿಯ ವ್ಯವಸ್ಥೆಯನ್ನು ರೂಪಿಸಿಕೊಳ್ಳುವ ಸ್ವಾತಂತ್ರವಿಟ್ಟುಕೊಂಡಿರುತ್ತದೆ, ಅದು ಇಷ್ಟವಾಗದವರು They can go and climb a tree…”

– **ಶ್ರೀ ಅಶೋಕ್ ಗೌಡ,** ಚಿಂತಕರು

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–560 004. ಮೊಬೈಲ್: 97391 83021

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–18.